

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 08 | Issue : 11 | Saturday 13-09-2025 | E-mail : maruti.b.hosamani76@gmail.com | Page: 4 | Price : Rs. 1/-


## ಚಿನ್ಮೂಲದ್ರಿ ಸಾಹಿತ್ಯ ವೇದಿಕೆಗೆ 19 ನೇ ವಾರ್ಷಿಕೋತ್ಸವದ ಸಂಭ್ರಮ



**ಸಿಹಿ ಕಹಿ ಸುದ್ದಿ,**

**ಚಿತ್ರದುರ್ಗ :** ಚಿನ್ಮೂಲದ್ರಿ ಸಾಹಿತ್ಯ ವೇದಿಕೆಯ 19 ನೇ. ವಾರ್ಷಿಕೋತ್ಸವದ ಸಂಭ್ರಮದ ಅಂಗವಾಗಿ ನಗರದ ಪತ್ರಿಕಾ ಭವನದಲ್ಲಿ ಡಾ, ಆರ್ ಗೌರಮ್ಮ ಅವರ ಚೊಚ್ಚಲ ಕೃತಿ "ಕಾವ್ಯದೀಪ" ಕವನ ಬಿಡುಗಡೆ ಮತ್ತು ಬೆಳಕು ಪ್ರಿಯ ಮುರಳಿಯವರಿಗೆ "ಚಿನ್ಮೂಲದ್ರಿ ಸಿರಿ ಶಿಕ್ಷಕ" ಪ್ರಶಸ್ತಿ ಮತ್ತು ಆರ್.ಜಿ ವಿನಾಯಕ ಹಾಗೂ ಎಂ.ಬಿ ಜಯದೇವಮೂರ್ತಿ ಅವರಿಗೆ "ಚಿನ್ಮೂಲದ್ರಿಯ ಚೈತನ್ಯ" ಪ್ರಶಸ್ತಿಯನ್ನು ಅವರ ಸೇವೆಯನ್ನು ಗುರುತಿಸಿ ವೇದಿಕೆಯಿಂದ ಪ್ರಧಾನ ಮಾಡಲಾಯಿತು.

19 ನೇ. ವಾರ್ಷಿಕೋತ್ಸವದ ಪ್ರಯುಕ್ತ ಚುಟುಕು ವಾಚನ, ಏಕಪಾತ್ರಾಭಿನಯ, ನಾಟಕ, ಭಾವಗೀತೆ ಗಾಯನ, ಭರತ ನಾಟ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ನಿರೂಪಣೆಯನ್ನು ಯತೀಶ್. ಎಂ ಸಿದ್ದಾಪುರ ನಡೆಸಿ ಕೊಟ್ಟರು.



ಕಾರ್ಯಕ್ರಮದ ಕೊನೆಯಲ್ಲಿ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ "ನ್ಯಾನೋ ಕಥೆಗಳು' ಎಂಬ ಕಿರು ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಸಮಾರಂಭದಲ್ಲಿ ಚಿನ್ಮೂಲದ್ರಿ ಸಾಹಿತ್ಯ ವೇದಿಕೆಯ ಸಂಸ್ಥಾಪಕ ಅಧ್ಯಕ್ಷರಾದ ದಯಾವತಿ ಪುತ್ತೂರ್ಕರ್, ಶಷೀವುಲ್ಲಾ, ಶೋಭಾ ಮಲ್ಲಿಕಾರ್ಜುನ್, ಡಾ, ಆರ್ ಗೌರಮ್ಮ, ಶಿವರುದ್ರಪ್ಪ ಪಂಡ್ರಹಳ್ಳಿ, ಮೀರಾ ನಾಡಿಗ್, ಡಾ, ಬಸವರಾಜ್ ಹರ್ತಿ, ಸತೀಶ್ ಕುಮಾರ್, ಮುರಳೀಧರ್, ಯತೀಶ್ ಎಂ ಸಿದ್ದಾಪುರ, ಶಿಲ್ಪಾ ಜಗದೀಶ್, ವೀರೇಶ್, ಉಷಾರಾಣಿ, ಶಾರದಾ ಜೈರಾಮ್, ಕೆ.ಎಸ್ ತಿಪ್ಪಮ್ಮ, ಗಿರೀಶ್, ಶಿವಾನಂದ. ಎಸ್ ಬಂಡೆಹಳ್ಳಿ ಸೇರಿದಂತೆ ಸಾಕಷ್ಟು ಸಾಹಿತ್ಯಾಸಕ್ತರು ಭಾಗವಹಿಸಿದ್ದರು.

ವರದಿ :
**ಯತೀಶ್ ಎಂ ಸಿದ್ದಾಪುರ, ಚಳ್ಳಕೆರೆ.**

## ಬ್ರಹ್ಮಾವರದಲ್ಲಿ ಆಘಾತಕಾರಿ ಘಟನೆ, ಹುಟ್ಟು ಹಬ್ಬದಂದೇ ಯುವತಿಗೆ ಚಾಕು ಇರಿತ – ಆರೋಪಿಗಾಗಿ ತೀವ್ರ ಶೋಧ

**ಸಿಹಿ ಕಹಿ ಸುದ್ದಿ,**

**ಉಡುಪಿ :** ಬ್ರಹ್ಮಾವರದಲ್ಲಿ ಇಡೀ ಜಿಲ್ಲೆಯನ್ನೇ ಬೆಚ್ಚಿ ಬೀಳಿಸಿದ ಆಘಾತಕಾರಿ ಘಟನೆಯೊಂದು ಬ್ರಹ್ಮಾವರ ತಾಲ್ಲೂಕಿನ ಕೊಕ್ಕರ್ಣೆಯಲ್ಲಿ ನಡೆದಿದೆ. ಹುಟ್ಟು ಹಬ್ಬದ ಸಂಭ್ರಮದಲ್ಲಿದ್ದ 20 ವರ್ಷದ ಯುವತಿ ರಕ್ಷಿತಾ ಅವರಿಗೆ ಕಾರ್ತಿಕ್ ಪೂಜಾರಿ ಎಂಬ ಯುವಕ ಚಾಕು ಇರಿದು ಗಂಭೀರವಾಗಿ ಗಾಯ ಗೊಳಿಸಿದ್ದಾನೆ. ಈ ಘಟನೆಯಿಂದ ಯುವತಿ ತೀವ್ರಗಾಯಗಳೊಂದಿಗೆ ಆಸ್ಪತ್ರೆ ಸೇರಿದ್ದು, ಆಕೆಯ ಬದುಕು ಈಗ ಅಕ್ಷರಶಃ ಸಾವಿನ ಅಂಚಿನಲ್ಲಿದೆ.

ಯುವತಿ ರಕ್ಷಿತಾ ಅವರು ಎಂದಿನಂತೆ ತನ್ನ ಮನೆಯಿಂದ ಮಣಿಪಾಲದಲ್ಲಿರುವ ಕೆಲಸದ ಸ್ಥಳಕ್ಕೆ ತೆರಳುತ್ತಿದ್ದಾಗ ಈ ದುಷ್ಕೃತ್ಯ ನಡೆದಿದೆ. ಆರೋಪಿ ಕಾರ್ತಿಕ್ ಕೃತ್ಯ ಎಸಗಿದ ಕೂಡಲೇ ತನ್ನ ಬೈಕ್ ಅನ್ನು ಸ್ಥಳದಲ್ಲೇ ಬಿಟ್ಟು ಪರಾರಿ ಯಾಗಿದ್ದಾನೆ. ಈ ಘಟನೆ ಮಾನವೀಯತೆ ಮತ್ತು ಕಾನೂನಿನ ಮೇಲಿನ ನಂಬಿಕೆಯನ್ನೇ ಪ್ರಶ್ನಿಸಿದೆ.

ಕಾನೂನಾತ್ಮಕ ಕ್ರಮ ಮತ್ತು ನ್ಯಾಯದ ಬೇಡಿಕೆ

ಈ ಘಟನೆಯು ಕೇವಲ ಒಂದು ಅಪರಾಧವಲ್ಲ, ಬದಲಾಗಿ ಸಮಾಜದಲ್ಲಿ ಹೆಚ್ಚುತ್ತಿರುವ



ಅಸಹಾಯಕತೆ ಮತ್ತು ಕ್ರೌರ್ಯದ ಸಂಕೇತವಾಗಿದೆ. ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಈ ಕುರಿತು ಭಾರತೀಯ ದಂಡ ಸಂಹಿತೆ (ಐಕಅ) ಯ ಸೆಕ್ಷನ್ 307 (ಕೊಲೆ ಯತ್ನ) ಅಡಿಯಲ್ಲಿ ಗಂಭೀರ ಪ್ರಕರಣ ದಾಖಲಾಗಿದೆ. ಪೊಲೀಸರು ಆರೋಪಿ ಕಾರ್ತಿಕ್‌ಗಾಗಿ ಶೋಧ ಕಾರ್ಯವನ್ನು ತೀವ್ರ ಗೊಳಿಸಿದ್ದಾರೆ. ಕಾನೂನು ಪ್ರಕಾರ, ಯುವತಿಯ ಮೇಲೆ ದೌರ್ಜನ್ಯ ಎಸಗಿದ ಆರೋಪಿಗೆ ಕಠಿಣ ಶಿಕ್ಷೆಯಾಗಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ. ಕಾನೂನಿನ ಪ್ರಕಾರ ಇಂತಹ ಕೃತ್ಯಗಳು ಸಾಬೀತಾದಾಗ, ಆರೋಪಿಗೆ ದೀರ್ಘಾವಧಿಯ ಜೈಲು ಶಿಕ್ಷೆ ಅಥವಾ ಜೀವಾವಧಿ ಶಿಕ್ಷೆಯಾಗುವ ಸಾಧ್ಯತೆ ಇದೆ.

ಸಮಾಜದ ಎಚ್ಚರಿಕೆ ಮತ್ತು ಜವಾಬ್ದಾರಿ

ಈ ದುರಂತ ಘಟನೆಯು ನಮಗೆಲ್ಲರಿಗೂ ಒಂದು ಪಾಠ. ಕಾನೂನು ಮತ್ತು ಸುವ್ಯವಸ್ಥೆಗಳನ್ನು ಕಡೆಗಣಿಸುವವರ ವಿರುದ್ಧ ಕಠಿಣ ಕ್ರಮಗಳು ಜಾರಿ ಯಾಗಬೇಕು. ಘಟನೆಗೆ ಕಾರಣನಾದ ಆರೋಪಿಯು ಯಾವುದೇ ರಕ್ಷಣೆ ಪಡೆಯದೇ ಕಾನೂನು ಬಲೆಗೆ ಬೀಳಬೇಕು. ರಕ್ಷಿತಾ ಅವರಿಗೆ ನ್ಯಾಯ ದೊರೆಯಬೇಕು ಮತ್ತು ಆಕೆಯ ಕುಟುಂಬಕ್ಕೆ ಸಾಂತ್ವನ ಸಿಗಬೇಕು. ಈ ನೋವಿನ ಘಟನೆಯು ಸಮಾಜದಲ್ಲಿ ಮಹಿಳೆಯರ ಸುರಕ್ಷತೆ ಮತ್ತು ಸೌಹಾರ್ದಯುತ ವಾತಾವರಣದ ಅಗತ್ಯವನ್ನು ಮತ್ತೊಮ್ಮೆ ನೆನಪಿಸಿದೆ. ಸಮಾಜದಲ್ಲಿ ಇಂತಹ ದುರ್ಘಟನೆಗಳು ನಡೆ–ಯದಂತೆ ಎಚ್ಚರಿಕೆ ವಹಿಸುವುದು ಪ್ರತಿಯೊಬ್ಬ ನಾಗರಿಕನ ಮತ್ತು ಸರ್ಕಾರದ ಜವಾಬ್ದಾರಿ ಯಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಸಿ.ಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸುವುದು, ಯುವಕರಲ್ಲಿ ನೈತಿಕ ಶಿಕ್ಷಣವನ್ನು ಉತ್ತೇಜಿಸುವುದು ಮತ್ತು ಅಂತಹ ಘಟನೆಗಳು ಸಂಭವಿಸಿದಾಗ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡುವುದು ಇಂತಹ ಪ್ರಕರಣಗಳನ್ನು ತಡೆಯಲು ಸಹಾಯ ಮಾಡಬಹುದು ಎಂದು ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಚಾನಲ್ ನ ಆಗ್ರಹ ಆಗಿದೆ.

**ವರದಿ:ಆರತಿ.ಗಿಳಿಯಾರು.**
**ಉಡುಪಿ**

## ಪತ್ರಕರ್ತರ ತರಬೇತಿಗಾಗಿ ಇನ್ಫೋಸಿಸ್ ಸ್ಪ್ರಿಂಗ್ಬೋರ್ಡ್: ಕರ್ನಾಟಕ ಮಾಧ್ಯಮ ಅಕಾಡೆಮಿ ಒಡಂಬಡಿಕೆ

**ಬೆಂಗಳೂರು :** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ದೇಶದಲ್ಲಿಯೇ ಮೊದಲ ಬಾರಿಗೆ ಜಾಗತಿಕ ಮಟ್ಟದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ದಿಗ್ಗಜ ಇನ್ಫೋಸಿಸ್ನ ಸ್ಪ್ರಿಂಗ್ಬೋರ್ಡ್ ಸಿಎಸ್ಆರ್ ಕಾರ್ಯಕ್ರಮದಡಿ ಸಹಭಾಗಿತ್ವಕ್ಕಾಗಿ ಕರ್ನಾಟಕ ಮಾಧ್ಯಮ ಅಕಾಡೆಮಿಯು ಪತ್ರಕರ್ತರ ತರಬೇತಿಗಾಗಿ ಒಡಂಬಡಿಕೆ ಮಾಡಿಕೊಂಡಿದೆ.

ಪತ್ರಕರ್ತರ ಸಾಫ್ಟ್ಸ್ಕಿಲ್ ತರಬೇತಿಯ ಉದ್ದೇಶಕ್ಕಾಗಿ ಮಾಡಿಕೊಳ್ಳುತ್ತಿರುವ ಈ ಒಡಂಬಡಿಕೆಯು ಸಿ.ಎಸ್.ಆರ್. ಅಡಿ ಕರ್ನಾಟಕ ಮಾಧ್ಯಮ ಅಕಾಡೆಮಿ ಕೈಗೆತ್ತಿಕೊಂಡ ಮೊದಲ ಕಾರ್ಯಕ್ರಮವಾಗಿದೆ.

ಇನ್ಫೋಸಿಸ್ ಅಖಖ ಯೋಜನೆಯ "ಸ್ಪ್ರಿಂಗ್ಬೋರ್ಡ್" ಪ್ಲಾಟ್ಫಾರ್ಮ್ ಮೂಲಕ ಪತ್ರಕರ್ತರ ಡಿಜಿಟಲ್ ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಸಾಮರ್ಥ್ಯ ನಿರ್ಮಾಣ ಈ ಒಡಂಬಡಿಕೆಯ ಉದ್ದೇಶವಾಗಿದೆ.

"ಇನ್ಫೋಸಿಸ್ ಸ್ಪ್ರಿಂಗ್ಬೋರ್ಡ್ ಮತ್ತು ಕರ್ನಾಟಕ ಮಾಧ್ಯಮ ಅಕಾಡೆಮಿಯ ಸಹಭಾಗಿತ್ವವು ಬದಲಾಗುತ್ತಿರುವ ಹೊಸ ಮಾಧ್ಯಮಕ್ಕೆ ಹೊಂದಿಕೊಳ್ಳುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಈ ವಿನೂತನ ಪ್ಲಾಟ್ಫಾರಂ



ಮಾಧ್ಯಮ ವೃತ್ತಿಪರರ ಕೌಶಲ್ಯ ಉನ್ನತೀಕರಣಕ್ಕೆ, ಅದರಲ್ಲೂ ವಿಶೇಷವಾಗಿ ಪತ್ರಕರ್ತರಿಗೆ ವೇಗವಾಗಿ ಬದಲಾಗುತ್ತಿರುವ ಸನ್ನಿವೇಶಗಳಿಗೆ ಅನುಗುಣವಾಗಿ ತಾಂತ್ರಿಕ ಪರಿಣತಿ ಹಾಗೂ ಸುದ್ದಿಯನ್ನು ಪ್ರಸ್ತುತಪಡಿಸುವ ಕೌಶಲವನ್ನು ಒದಗಿಸಲಿದೆ" ಎಂಬ ಆಶಯವನ್ನು ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯ–ಕ್ಷೆ ಶ್ರೀಮತಿ ಆಯೇಶಾ ಖಾನಂ ಅವರು ವ್ಯಕ್ತಪಡಿಸಿದ್ದಾರೆ.

"ಇನ್ಫೋಸಿಸ್ ಸ್ಪ್ರಿಂಗ್ಬೋರ್ಡ್ ಶಿಕ್ಷಣ ಕುರಿತ ಸಿಎಸ್ಆರ್ ಕಾರ್ಯಕ್ರಮವಾಗಿದೆ. ಇಂದು ಇನ್ಫೋಸಿಸ್ ಸ್ಪ್ರಿಂಗ್ಬೋರ್ಡ್ ಮಾಧ್ಯಮ ಅಕಾಡೆಮಿಯೊಂದಿಗೆ ಒಡಂಬಡಿಕೆಗೆ ಸಹಿ ಹಾಕಿದೆ. ಮಾಧ್ಯಮ ಅಕಾಡೆಮಿಗೆ ಸ್ಪ್ರಿಂಗ್ಬೋರ್ಡ್ನ ಡಿಜಿಟಲ್ ವಿಷಯಗಳಿಗೆ ಪ್ರವೇಶ ಲಭಿಸಲಿದೆ ಮತ್ತು ಅವರು ಸಾಫ್ಟ್ ಸ್ಕಿಲ್ ಗಳು, ವ್ಯಕ್ತಿತ್ವ ವಿಕಾಸ ಹಾಗೂ ಕೃತಕ ಬುದ್ಧಿಮತ್ತೆ (ಂಖ) ಸೇರಿದಂತೆ ಇತ್ತೀಚಿನ ತಂತ್ರಜ್ಞಾನಗಳ ಅವಲೋಕನ ಕುರಿತ ವಿಷಯಗಳಿಂದ ಪ್ರಯೋಜನ ಪಡೆಯಬಹುದು. ಇದು ವಿಶೇಷವಾಗಿ 2ನೇ ಹಾಗೂ 3ನೇ ಹಂತದ ನಗರಗಳ ಪತ್ರಕರ್ತರಿಗೆ ಖಂಡಿತವಾಗಿಯೂ ಸಹಾಯಕವಾಗಲಿದೆ" ಎಂದು ಇನ್ಫೋಸಿಸ್ ನ ಹಿರಿಯ ಉಪಾಧ್ಯಕ್ಷ (ಇಟಿಎ) ಶ್ರೀ ಸತೀಶ ಬಿ. ನಂಜಪ್ಪ ಅವರು ಅಭಿಪ್ರಾಯ ಪಟ್ಟಿದ್ದಾರೆ.

ತರಬೇತಿ

ಇನ್ಫೋಸಿಸ್ ಸ್ಪ್ರಿಂಗ್ಬೋರ್ಡ್ ಕಾರ್ಯಕ್ರಮದಡಿ ಪತ್ರಕರ್ತರಿಗೆ ಮೂರು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಇದರಲ್ಲಿ ಡಿಜಿಟಲ್ ಮಾಧ್ಯಮಕ್ಕೆ ಅಗತ್ಯ ಕೌಶಲ್ಯಗಳು, ಕೃತಕ ಬುದ್ಧಿಮತ್ತೆಯ ಬಳಕೆ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದಂತೆ ತರಬೇತಿ ನೀಡಲಾಗುವುದು.

ಈ ವರ್ಷದಲ್ಲಿ ಒಟ್ಟು ಮೂರು ಕಾರ್ಯಕ್ರಮಗಳ ಮೂಲಕ ಒಟ್ಟು 150 ಪತ್ರಕರ್ತರಿಗೆ ತರಬೇತಿ ನೀಡಲು ಉದ್ದೇಶಿಸಿದೆ. ಇದರಲ್ಲಿ ವಿಶೇಷವಾಗಿ ಒಂದು ಬ್ಯಾಚ್ನಲ್ಲಿ ಮಹಿಳಾ ಆಯವ್ಯಯದಡಿ ಪತ್ರಕರ್ತೆಯರಿಗೆ ತರಬೇತಿ ನೀಡಲು ಉದ್ದೇಶಿಸಿದೆ.

ಜಿಲ್ಲಾ ಮಟ್ಟದ ಪತ್ರಕರ್ತರಿಗೆ ಈ ತರಬೇತಿಯಲ್ಲಿ ಆದ್ಯತೆ ನೀಡಲಾಗುವುದು.

ಇನ್ಫೋಸಿಸ್ ಸಂಸ್ಥೆಯು ಪ್ಲಾಟ್ಫಾರ್ಮ್ ಮತ್ತು ಪರಿಣತಿ ಒದಗಿಸಲಿದೆ.ಕರ್ನಾಟಕ ಮಾಧ್ಯಮ ಅಕಾಡೆಮಿಯು ಪತ್ರಕರ್ತರು ಹಾಗೂ ಶಿಕ್ಷಕರ ಭಾಗವಹಿಸುವಿಕೆ ಸಮನ್ವಯಗೊಳಿಸಲಿದೆ.

ಪತ್ರಿಕೋದ್ಯಮ ಕ್ಷೇತ್ರದಲ್ಲಿ ಗುಣಮಟ್ಟದ ಸುಧಾರಣೆಯ ನಿಟ್ಟಿನಲ್ಲಿ ಇದೊಂದು ಮಹತ್ವದ ಉಪಕ್ರಮವಾಗಿದೆ. ಹೆಚ್ಚು ಪತ್ರಕರ್ತರಿಗೆ ತರಬೇತಿ ನೀಡುವ ಆಶಯದೊಂದಿಗೆ ಕರ್ನಾಟಕ ಮಾಧ್ಯಮ ಅಕಾಡೆಮಿಯು ಮುಂದಡಿಯಿಟ್ಟಿದೆ.

ಈ ಸಂದರ್ಭದಲ್ಲಿ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಶಾ ಖಾನಂ, ಸದಸ್ಯ ಹೆಚ್.ವಿ. ಕಿರಣ್ ಇನ್ಫೋಸಿಸ್ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಸತೀಶ ಬಿ. ನಂಜಪ್ಪ, ಹಿರಿಯ ಅಧಿಕಾರಿಗಳಾದ ಸಂತೋಷ್ ಅನಂತಪುರ, ಬಿಳಿಗಿರಿ ರಂಗ ಮೊದಲಾದವರು ಉಪಸ್ಥಿತರಿದ್ದರು.

## ಮಹಿಳಾ ಸ್ವಾಲಂಬನೆಗೆ ಸಂಜೀವಿನಿ ಯೋಜನೆ ಸಹಕಾರಿ: ಸಿದ್ದಪ್ಪ ಪಟ್ಟಿಯಾಳ



**ರಬಕವಿ :** ತಾಲೂಕಿನ ಚಿಮ್ಮಡ ಗ್ರಾಮದಲ್ಲಿ ಶ್ರಮ ಬಿಂದು ಸಂಜೀವಿನಿ ಮಹಿಳಾ ಕಿಸಾನ್ ಪ್ರೊಡ್ಯೂಸರ್ ಕಂಪನಿಯ ಲಿಮಿಟೆಡ್ ನ ದ್ವಿತೀಯ ವಾರ್ಷಿಕ ಮಹಾಸಭೆಯ ಉದ್ಘಾಟನೆ ಕಾರ್ಯಕ್ರಮ ಇತ್ತೀಚಿಗೆ ಜರುಗಿತು.

ಕಾರ್ಯಕ್ರಮದ ಉದ್ಘಾಟಕರಾದ ರಬಕವಿ ಬನಹಟ್ಟಿಯ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸಿದ್ದಪ್ಪ ಪಟ್ಟಿಯಾಳ ಇವರು ಮಾತನಾಡಿ ಗ್ರಾಮೀಣ ಮಹಿಳೆಯರ ಸೌಲಂಬನೆಗೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಸಂಜೀವಿನಿ ಯೋಜನೆಗಳು ಸಹಕಾರಿಗಳಾಗಿವೆ, ಈ ಕಂಪನಿಯು ಒಂದು ಸಾವಿರ ರೈತ ಮಹಿಳೆಯರ ಸದಸ್ಯತ್ವ ಹೊಂದಿದ್ದು ಮಹಿಳೆಯರ ಕೌಶಲ್ಯ ಆರ್ಥಿಕ ಸಬಲೀಕರಣ ಗುರಿ ಹೊಂದಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಜಿಲ್ಲಾ ವ್ಯವಸ್ಥಾಪಕ ಭೀಮಾನಂದ ಶೆಟ್ಟರ್ ಇವರು ಮಾತನಾಡಿ ರೈತ ಮಹಿಳೆಯರಿಂದ ಉತ್ಪಾದಕರ ಗುಂಪುಗಳನ್ನು ಮಾಡಿ ಅವರಿಂದ ನೇರವಾಗಿ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡಿ ನಮ್ಮ ಕಂಪನಿಯಿಂದ ಗುಣಮಟ್ಟದ ಮೌಲ್ಯವರ್ಧಕ ವಸ್ತುಗಳನ್ನು ತಯಾರು ಮಾಡಿ ಮಾರಾಟ ಮಾಡಲಾಗುತ್ತದೆ ಇದರಿಂದ ಉದ್ಯೋಗ ಮತ್ತು ಆರ್ಥಿಕ ಸಾವಲಂಬನೆ ಯಾಗಲು ಅನುಕೂಲ ವಾಗುತ್ತದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಮಹಿಳಾ ಕಂಪನಿಯ ಅಧ್ಯಕ್ಷರಾದ ಸುಜಾತ ಕವಟಕೊಪ್ಪ ಅಧ್ಯಕ್ಷತೆ ವಹಿಸಿದರು,

ಅತಿಥಿಗಳಾದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಶಿವಾನಂದ್ ಬಿರಾದರ್, ತಾಲೂಕ ವ್ಯವಸ್ಥಾಪಕರಾದ ಪ್ರಕಾಶ್ ಕೊಡಬಾಗಿ, ಮಹಿಳಾ ಕಿಸಾನ್ ಗುಂಪಿನ ಪದಾಧಿಕಾರಿಗಳು, ಒಕ್ಕೂಟದ ಪದಾಧಿಕಾರಿಗಳು ಭಾಗವಹಿಸಿದ್ದರು.

ಈ ಕಾರ್ಯಕ್ರಮವನ್ನು ರೂಪ ಮಿರ್ಜಿ ಸ್ವಾಗತಿಸಿದರು, ಸೋಮೇಶ್ ಹಿರೇಮಠ ನಿರೂಪಣೆ ಮಾಡಿದರು, ಶ್ರೀನಾಥ್ ಭುವನವರ ಹೊಂದಿಸಿದರು.

## ರತ್ನತ್ರಯ ಬ್ಯಾಂಕಿಗೆ 27 ಲಕ್ಷ ಲಾಭ

**ತೇರದಾಳ:** ದೇಶದ ಆರ್ಥಿಕ ಸುಧಾರಣೆಯಲ್ಲಿ ಸಹಕಾರಿ ಕ್ಷೇತ್ರದ ಬಹುದೊಡ್ಡ ಕೊಡುಗೆ ಇದೆ. ಗ್ರಾಹಕರ ಸಮಸ್ಯೆಗಳಿಗೆ ಸ್ಪಂದಿಸುವಂಥ ಯೋಜನೆಗಳನ್ನು ಬ್ಯಾಂಕುಗಳು ಹೊಂದಿದಾಗ ಮಾತ್ರ ಸಾರ್ಥಕ ಆಗುತ್ತದೆ ಎಂದು ಇಲ್ಲಿನ ರತ್ನತ್ರಯ ಅಲ್ಪಸಂಖ್ಯಾತರ ಸೌಹಾರ್ದ ಬ್ಯಾಂಕಿನ ಅಧ್ಯಕ್ಷ ಡಾ. ಮಹಾವೀರ ದಾನಿಗೊಂಡ ತಮ್ಮ ಅಭಿಮತ ವ್ಯಕ್ತಪಡಿಸಿದರು.

ಬ್ಯಾಂಕಿನ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬ್ಯಾಂಕಿಗೆ ಬರುವ ಗ್ರಾಹಕರಿಗೆ ಯಾವುದೇ ರೀತಿಯ ಹೊರೆಯಾಗದಂತೆ ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಸಾಲ ಪಡೆದುಕೊಂಡ ಗ್ರಾಹಕರು ಆರ್ಥಿಕವಾಗಿ ಸುಧಾರಣೆ ಹೊಂದಿದಾಗ ಮಾತ್ರ



ಬ್ಯಾಂಕುಗಳು ಅಭಿವೃದ್ಧಿ ಆಗಲು ಸಾಧ್ಯ ಎಂದು ಹೇಳಿದರು.

ಉಪಾಧ್ಯಕ್ಷ ಭೂಪಾಲ ಆಲಗೂರ, ಕೇವಲ ಆರು ವರ್ಷದಲ್ಲಿ ಹದಿನಾರು ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ಒಂಭತ್ತು ಕೋಟಿಗೂ ಅಧಿಕ ವಿವಿಧ ಯೋಜನೆಯಡಿ ಸಾಲ ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ 27 ಲಕ್ಷ ಲಾಭ ಗಳಿಸಿದೆ ಎಂದು ಸಭೆಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಹಾರೂಗೇರಿ ಜಾಗೃತಿ ಬ್ಯಾಂಕ್ ಅಧ್ಯಕ್ಷ ಶಾಂತಿನಾಥ ಅಸ್ಕಿ, ಡಾ. ಪುಷ್ಪದಂತ ದಾನಿಗೊಂಡ, ಸುರೇಶ ಅಕ್ಕಿವಾಟ, ಅಲ್ಲಪ್ಪ ಬಾಬಗೊಂಡ, ಅಜಿತ ಮಗದುಮ್,

ಭೀಮಪ್ಪ ಆಳಗೊಂಡ, ಜಿನ್ನಪ್ಪ ಸವದತ್ತಿ, ಪರಪ್ಪ ಹಿಪ್ಪರಗಿ, ತವನಪ್ಪ ಕೋರಿ, ಬ್ಯಾಂಕಿನ ವ್ಯವಸ್ಥಾಪಕ ಆಧಿನಾಥ ನಾಂದ್ರೇಕರ, ಈರಪ್ಪ ಶೇಡಶ್ಯಾಳ, ತಮ್ಮಣ್ಣ ಅಸ್ಕಿ, ಶೀತಲ ಕೋ–ರಿಗೇರಿ, ಆದಪ್ಪ ಜಮಖಂಡಿ, ಪ್ರವೀಣ ನಾಶಿ, ಚಿದಾನಂದ ಜಡಿ, ಶೀತಲ ಬಾಬಗೊಂಡ, ಶ್ಯಾಮ ರೇಣಕೆ, ನಟವರ ಲೋಹಿಯಾ ಇನ್ನಿತರರು ಭಾಗವಹಿಸಿದ್ದರು.

## ಶ್ರದ್ಧೆಯಿಂದ ಕಲಿತ ವಿದ್ಯೆ ಬಾಳಿಗೆ ಬೆಳಕು: ರೋಹಿಣಿ

**ಗುಳೇದಗುಡ್ಡ :** ಮಕ್ಕಳಲ್ಲಿ ಶಿಕ್ಷಕರ ಬಗ್ಗೆ ಅಭಿಮಾನ, ಶ್ರದ್ದೆ, ಗೌರವ, ನಂಬಿಕೆ ಇರಬೇಕು. ಶಿಕ್ಷಣದಿಂದ ಮಾತ್ರ ಮಕ್ಕಳ ಉಜ್ವಲ ಭವಿಷ್ಯ ನಿರ್ಮಾಣವಾಗಲು ಸಾಧ್ಯ ಎಂದು ವಿಜಯಪುರ ಕಾಲೇಜಿನ ಉಪನ್ಯಾಸಕಿ ರೋಹಿಣಿ ಜಪ್ತಿ ಹೇಳಿದರು.



ಅವರು ಪಟ್ಟಣದ ಪೆಟ್ಸ್ ಇಂಟ–ರ್ನ್ಯಾಷನಲ್ ಪಬ್ಲಿಕ್ ಸ್ಕೂಲ್ ನಲ್ಲಿ ಹಮ್ಮಿಕೊಂಡ ಶಿಕ್ಷಕರ ದಿನಾಚರಣೆ ಹಾಗೂ ಮಕ್ಕಳ ಸಾಂಸ್ಕೃತಿ–ಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಮಕ್ಕಳು ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ, ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು. ಮಾನವೀಯ ಮೌಲ್ಯಗಳು, ಗುಣಾತ್ಮಕ ಶಿಕ್ಷಣ, ಆದ–ರ್ಶ ಸಂಸ್ಕಾರ ಸಂಸ್ಕೃತಿ ಪ್ರತಿಯೊಬ್ಬ ವ್ಯಕ್ತಿಯ ಉನ್ನತ ಬೆಳವಣಿಗೆಗೆ ಬಹಳಷ್ಟು ಪೂರಕವಾಗುತ್ತದೆ. ಶಿಕ್ಷಕರು ಕೂಡ ಮಕ್ಕಳಿಗೆ ಬಹಳಷ್ಟು ಕಾಳಜಿಯಿಂದ ಹಾಗೂ ಅಷ್ಟೇ ಶಿಸ್ತು ಬದ್ಧವಾಗಿ ಮಕ್ಕಳ ಕಲಿಕೆಗೆ ಆದ್ಯತೆ ನೀಡಬೇಕು ಎಂದರು. ಪೆಟ್ಸ್ ಇಂಟರ್ನ್ಯಾಷನಲ್ ಪಬ್ಲಿಕ್ ಶಾಲೆಯ ಛೇರ್ಮನ್ನ ಪುರುಷೋತ್ತಮ್ ಝುಂವರ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಾಲೆಯಲ್ಲಿ ಶಿಕ್ಷಕರು, ಮನೆಯಲ್ಲಿ ಪಾಲಕರು ಮಕ್ಕಳಿಗೆ ಮೌಲ್ಯಾಧಾರಿತ, ಗುಣಾತ್ಮಕ ಶಿಕ್ಷಣ ಮತ್ತು ಸಂಸ್ಕಾರ ನೀಡುವ ಅಗತ್ಯತೆ ಇದೆ ಮಕ್ಕಳು ಕೂಡ ಶಿಕ್ಷಕರನ್ನು ಗೌರವದಿಂದ ಕಾಣಬೇಕು. ಶಿಕ್ಷಕರ ಬಗ್ಗೆ ಪ್ರೀತಿ, ವಿಶ್ವಾಸ ತೋರಿಸಬೇಕು ಎಂದರು.

ಶಾಲೆಯ ಪ್ರಾಚಾರ್ಯ ಎನ್.ವೈ.ಭಾವಿ, ಶಿಕ್ಷಕಿ ಸುನಿತಾ ಸಿಂದಗಿ ಅವರು ಶಿಕ್ಷಕರ ಕುರಿತು ಮಾತನಾಡಿದರು.

ಸಮಾರಂಭದಲ್ಲಿ ಇಮ್ತಿಯಾಜ್ ಪೆಂಡಾರಿ, ಅರುಣ ಕಾಟವಾ, ವಿವೇಕಾನಂದ ದೇವಾಂಗಮಠ, ಶೋಭಾ ಶೇಖಾ, ಮಮತಾಜ್ ಪಂಡಾರಿ, ಅಪೂರ್ವ ಹಳ್ಳೂರ, ಸರ್ದಾರ್ ಮುಂದಿನಮಣಿ, ತೇಜಸ್ವಿನಿ ಪ್ಯಾಟಿಶೆಟ್ಟರ್, ಪವಿತ್ರಾ ಕೆಲೂಡಿ ಇತರರು ಇದ್ದರು.

# ಕಲಾವಿದರಿಗೆ ಸನ್ಮಾನ



**ಚಿಮ್ಮಡ :** ರಬಕವಿ ಬನಹಟ್ಟಿ ತಾಲೂಕಿನ ಚಿಮ್ಮಡ ಗ್ರಾಮದ
ಪ್ರಭುಲಿಂಗೇಶ್ವರ ಕಿಚಡಿ ಜಾತ್ರಾ ಮಹೋತ್ಸವ ಸಮಿತಿ ಹಾಗೂ ವಿರಕ್ತಮಠದ ಪ್ರಭು ಸ್ವಾಮೀಜಿಗಳು ನಾಟಕದ ಕಲಾವಿದರನ್ನು ಸನ್ಮಾನಿಸಿ ಆಶೀರ್ವಾದಿಸಿದರು. ಕಿಚಡಿ ಜಾತ್ರೆ ನಿಮಿತ್ಯ ಕಲಾ ಮತ್ತು ಸಾಂಸ್ಕೃತಿಕ ಯುವ ನಾಟ್ಯ ಸಂಘದ 25 ನೇ ಕಲಾಕಾಣಿಕೆಯಾಗಿ 'ಸೆರೆ ಅಂಗಡಿ ಸಂಗವ್ವ' ನಾಟಕ ಪ್ರದರ್ಶನ ನಡೆಯಿತು. ಈ ನಾಟಕದಲ್ಲಿ ಅಭಿನಯಿಸಲು ಮುಖ್ಯ ಹಾಸ್ಯ ಪಾತ್ರಧಾರಿಗಳು, ಕಾಮಿಡಿ ಕಿಲಾಡಿಗಳು ಖ್ಯಾತಿಯ ಬಸು ದಾರವಾಡ, ಚಿತ್ರನಟ ಸಿದ್ರಾಮ ತತ್ರಾಣಿ ಆಗಮಿಸಿದ್ದರು. ಜಾತ್ರಾ ಮಹೋತ್ಸವ ಸೇವಾ ಸಮಿತಿ ಹಾಗೂ ವಿರಕ್ತಮಠದ ಸ್ವಾಮೀಜಿ ಕಲಾವಿದರಿಗೆ ಆಶೀರ್ವಾದ ಮಾಡಿದರು.

# '7' ಸೈಡ್ ಹೊನಲು ಬೆಳಕಿನ ರಿಂಕ್ ಹಾಕಿ ಪಂದ್ಯಾವಳಿ



**ಬಾಗಲಕೋಟೆ :** ರಾಷ್ಟ್ರೀಯ ಕ್ರೀಡಾ ದಿನಾಚರಣೆ ಹಾಗೂ ಮೇಜರ್ ಧ್ಯಾನಚಂದ ಅವರ ಹುಟ್ಟುಹಬ್ಬದ ಅಂಗವಾಗಿ ಬಿವಿವಿ ಸಂಘದ ಬಾಗಲಕೋಟೆ ಸಿಟಿ ಸ್ಪೋರ್ಟ್ಸ್ ಕ್ಲಬ್ ಹಾಗೂ ಹಾಕಿ ಫ್ಯಾನ್ಸ್ ಬಾಗಲಕೋಟೆ ಸಂಯುಕ್ತ ಆಶ್ರಯದಲ್ಲಿ ಅಹ್ವಾನಿತ '7' ಸೈಡ್ ಹೊನಲು ಬೆಳಕಿನ ರಿಂಕ್ ಹಾಕಿ ಪಂದ್ಯಾವಳಿಗಳು ಜರುಗಿದವು. ಹಾಕಿ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರು ಬಾಗಲಕೋಟೆಯಲ್ಲಿ ಹಾಕು ರಾಷ್ಟ್ರ ಮಟ್ಟದ ಕ್ರೀಡೆ ಆಯೋಜಿಸುವಂತೆ ಸಲಹೆ ನೀಡಿದರು.

ಮುಕ್ತಾಯ ಸಮಾರಂಭಕ್ಕೆ ಸಿಟಿ ಸ್ಪೋರ್ಟ್ಸ್ ಕ್ಲಬ್‌ದ ಕಾರ್ಯಾಧ್ಯಕ್ಷರಾದ ಶಿವಲಿಂಗಪ್ಪ ಎಚ್. ಮೊರಬದ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಜಗನ್ನಾಥ ವಿ. ಚವ್ಹಾಣ ಇವರು ಆಗಮಿಸಿ ಪ್ರಶಸ್ತಿ ವಿತರಣೆ ಮಾಡಿದರು.

# ಎಫ್.ಕೆ.ಸಿ.ಸಿ.ಐನಿಂದ "ಇಂಡಿಯಾ ಸಿಎಸ್ಆರ್ ಅಂಡ್ ಸಸ್ಟೈನಬಿಲಿಟಿ" ಪ್ರಶಸ್ತಿ ಪ್ರದಾನ

## ಸಾಮಾಜಿಕ ಹೊಣೆಗಾರಿಕೆಯಲ್ಲಿ ಮೂರನೇ ಸ್ಥಾನದಲ್ಲಿ ಕರ್ನಾಟಕ: ಗುಣಮಟ್ಟದ ಶಿಕ್ಷಣ ಇಂದಿನ ಅಗತ್ಯ: ಡಾ. ಜಿ. ಪರಮೇಶ್ವರ್



**ಬೆಂಗಳೂರು :** ಸಾಮಾಜಿಕ ಹೊಣೆಗಾರಿಕೆ ಎಂಬುದು ಕರ್ನಾಟಕದಲ್ಲಿ ಅಂತರ್ಗತವಾಗಿದ್ದು, ಸಿ.ಎಸ್.ಆರ್ ನಿಧಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಶಿಕ್ಷಣ, ಕೈಗಾರಿಕೆ, ಆರೋಗ್ಯ ವಲಯದಲ್ಲಿ ಗಮನಾರ್ಹ ಸಾಧನೆ ಮಾಡುತ್ತಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ.

ಎಫ್.ಕೆ.ಸಿ.ಸಿ.ಐನ ಸರ್ ಎಂವಿ ಸಭಾಂಗಣದಲ್ಲಿ"ಇಂಡಿಯಾ ಸಿಎಸ್ಆರ್ ಅಂಡ್ ಸಸ್ಟೈನಬಿಲಿಟಿ" ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಸಿ.ಎಸ್.ಆರ್ ಎಂಬುದು ಸಮಾಜದ ಅಭಿವೃದ್ಧಿಗಾಗಿ ಇರುವ ವ್ಯವಸ್ಥೆ. ಇದನ್ನು ನಾವು ನಾಲ್ಕೈದು ದಶಕಗಳ ಹಿಂದಿನಿಂದಲೇ ರಾಜ್ಯದಲ್ಲಿ ನೋಡುತ್ತಾ ಬಂದಿದ್ದೇವೆ. 2013 ರಲ್ಲಿ ಸಿ.ಎಸ್.ಆರ್ ಕಾಯ್ದೆ ಜಾರಿಗೆ ಬಂತು. 2023 ? 24 ರಲ್ಲಿ ದೇಶದಲ್ಲಿ 34 ಸಾವಿರ ಕೋಟಿ ರೂ ಕೊಡುಗೆ ನೀಡಲಾಗಿದೆ. ಕರ್ನಾಟಕ ಮೂರನೇ ಸ್ಥಾನದಲ್ಲಿದ್ದು, 2,500 ಕೋಟಿ ರೂ ಮೊತ್ತವನ್ನು ಉದಾರವಾಗಿ ದೇಣಿಗೆ ನೀಡಿರುವುದು ಉತ್ತಮ ಬೆಳವಣಿಗೆ. ಕರ್ನಾಟಕ ಶಿಕ್ಷಣದಲ್ಲಿ ಮಂಚೂಣಿಯಲ್ಲಿದ್ದು, ಪ್ರತಿ ಹಳ್ಳಿಯಲ್ಲಿ ಶಾಲೆಗಳಿವೆ. ಆದರೆ ಗುಣಮಟ್ಟದ ಶಿಕ್ಷಣ ಇಂದಿನ ಅಗತ್ಯವಾಗಿದೆ. ಕೈಗಾರಿಕೆ, ದೇಶದ ಬೆಳವಣಿಗೆಗೆ ಕರ್ನಾಟಕ ಕೊಡುಗೆ ನೀಡುತ್ತಿದೆ ಎಂದರು.

ಕರ್ನಾಟಕದಲ್ಲಿ ಹೂಡಿಕೆಗೆ ಪರಿಸರ ಸ್ನೇಹಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಂಗಳೂರಿನಲ್ಲಿ ಹೂಡಿಕೆದಾದರರು ಆಸಕ್ತರಾಗಿದ್ದು, ಕರ್ನಾಟಕದಲ್ಲಿ ಕರಾವಳಿ ನಗರ ಎರಡನೇ ಸ್ಥಾನದಲ್ಲಿದೆ. ಈ ನಿಟ್ಟಿನಲ್ಲಿ ಮಂಗಳೂರು ನಗರವನ್ನು ಮತ್ತಷ್ಟು ಅಭಿವೃದ್ಧಿಪಡಿಸುತ್ತೇವೆ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಆರೋಗ್ಯ ಪ್ರವಾಸೋದ್ಯಮ ಆರಂಭಿಸಲಾಯಿತು. ಆಗ ಅಪಲೋ, ವೊಕಾರ್ಡ್, ನಾರಾಯಣ ಹೃದಯಾಲಯದಂತಹ ಆಸ್ಪತ್ರೆಗಳು ಪ್ರಾರಂಭವಾದವು. ಎಲ್ಲಾ ವಲಯಗಳು ಸಮಾಜಕ್ಕೆ ಉಪಯುಕ್ತ ಮತ್ತು ಅರ್ಥಪೂರ್ಣವಾಗಿ ಇವು ಕೆಲಸ ಮಾಡುತ್ತಿವೆ. ಕರ್ನಾಟಕದಲ್ಲಿ ಶೇ 40 ರಷ್ಟು ತಂತ್ರಾಂಶ ರಫ್ತು ಮಾಡಲಾಗುತ್ತಿದೆ.ಜಗತ್ತಿನ ಯಾವುದೇ ದೇಶದಲ್ಲಿ ನೋಡಿದರೂ ಕರ್ನಾಟಕದವರು ಕಾಣಸಿಗುತ್ತಾರೆ ಎಂದರು.

ಪಿ.ವಿ. ನರಸಿಂಹರಾವ್ ಅವರು ಯುಜಿಸಿ ಮೂಲಕ ವಿವಿಗಳ ಸ್ವರೂಪವನ್ನೇ ಬದಲಿಸಿದರು. 1947 ರಿಂದ 1991 ರವರೆಗೆ ಒಂದು ಹಂತವಾದರೆ 1990 ರ ಉದಾರಿಕರಣದ ನಂತರ ವ್ಯಾಪಕ ಬದಲಾವಣೆಯಾಯಿತು. ನಾವೀಗ ಜಾಗತಿಕವಾಗಿ ಮಂಚೂಣಿಯಲ್ಲಿದ್ದೇವೆ. ಇಂತಹ ಶಕ್ತಿ ಬಂದಿದ್ದು ಕೈಗಾರಿಕಾ ವಲಯಗಳಿಂದ. ನಾವು ಒಂದು ಹಂತದಲ್ಲಿ ಆಹಾರ ಆಮದು ಮಾಡಿಕೊಳ್ಳುತ್ತಿದ್ದೇವು. ಇಂದು ರಫ್ತು ಮಾಡುತ್ತಿದ್ದೇವೆ. ಹಸಿರು ಕ್ರಾಂತಿ ನಂತರ ಉತ್ಪಾದನೆ ಪ್ರಮಾಣ ಎರಡು, ಮೂರು ಪಟ್ಟು ಹೆಚ್ಚಾಗಿದೆ. ರಕ್ಷಣೆ, ಶಿಕ್ಷಣ ಮತ್ತು ಹಸಿರು ಮೂಲಸೌಕರ್ಯಗಳಲ್ಲಿ ಹೂಡಿಕೆಗಳು ಹೆಚ್ಚಾಗಿವೆ ಎಂದರು.

ಕಾರ್ಪೋರೇಟ್, ಕಾರ್ಪೋರೇಟ್ ಅಂಡ್ ಫೌಂಡೇಷನ್, ಎನ್.ಜಿ.ಒ, ಎಂ.ಎಸ್.ಎಂ.ಇ, ವಲಯಗಳಲ್ಲಿ ಆರೋಗ್ಯ, ಶಿಕ್ಷಣ, ಕೌಶಲ್ಯಾಭಿವೃದ್ಧಿ, ಮಹಿಳಾ ಅಭಿವೃದ್ಧಿ, ನೀರು, ನೈರ್ಮಲ್ಯ, ಶುಚಿತ್ವ, ಜಲ ನಿರ್ವಹಣೆ ಮತ್ತಿತರೆ ವಲಯಗಳಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಎಫ್.ಕೆ.ಸಿ.ಸಿ.ಐನ ಸಾಂಸ್ಥಿಕ ಹೊಣೆಗಾರಿಕೆ ಸಮಿತಿ ಅಧ್ಯಕ್ಷ ಕೀರ್ತನ್ ಕುಮಾರ್, ಎಫ್ಕೆಸಿಸಿಐ ಅಧ್ಯಕ್ಷರಾಗಿ ಆಯ್ಕೆಯಾದ ಉಮಾ ರೆಡ್ಡಿ; ಹಿರಿಯ ಉಪಾಧ್ಯಕ್ಷರಾಗಿ ಆಯ್ಕೆಯಾದ ಟಿ.ಸಾಯಿರಾಮ್ ಪ್ರಸಾದ್ ಮತ್ತು ಎಫ್.ಕೆ.ಸಿ.ಸಿ.ಐ ನಿಕಟಪೂರ್ವ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

# ಸಂಭ್ರಮದ ಈದ್ ಮಿಲಾದ್ ಮೆರವಣಿಗೆ



**ಗುಳೇದಗುಡ್ಡ :** ಪಟ್ಟಣದಲ್ಲಿ ಪವಿತ್ರ ಈದ್ ಮಿಲಾದ್ ಕಾರ್ಯಕ್ರಮ ಹಾಗೂ ಭವ್ಯ ಮೆರವಣಿಗೆಯನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬಹಳಷ್ಟು ಅದ್ದೂರಿಯಿಂದ ನಡೆಸಲಾಯಿತು. ಪಟ್ಟಣದಲ್ಲಿ ಸಮಸ್ತ ಮುಸ್ಲಿಂ ಸಮಾಜ ಬಾಂಧವರು ಒಟ್ಟುಗೂಡಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಭ್ರಮದಿಂದ ಈದ್ ಮಿಲಾದ್ ಮೆರವಣಿಗೆ ನಡೆಸಿ ಗಮನ ಸೆಳೆದರು. ಮಹಮ್ಮದ್ ಪೈಗಂಬರ್ ಜನ್ಮದಿನಾಚರಣೆಯ ಅಂಗವಾಗಿ ಸಮಸ್ತ ಮುಸ್ಲಿಂ ಬಾಂಧವರು ಬಹಳಷ್ಟು ಶ್ರದ್ಧೆ, ಭಕ್ತಿಯಿಂದ ಮೆರವಣಿಗೆ ನಡೆಸಿ ಈದ್ ಮಿಲಾದ್ ಹಬ್ಬವನ್ನು ಆಚರಿಸಿದರು.

ಪಟ್ಟಣದ ಬಂಡಾರಿ ಕಾಲೇಜ್ ಸರ್ಕಲದಿಂದ ಈ ಸಂಭ್ರಮದ ಈದ್ ಮಿಲಾದ್ ಮೆರವಣಿಗೆ ಆರಂಭಗೊಂಡು ಪವಾರ್ ಕ್ರಾಸ್, ಪುರಸಭೆ, ಕಂಠಿಪೇಟೆ, ಗಚ್ಚನಕಟ್ಟಿ, ಚೌಬಜಾರ್, ಅರಳಿಕಟ್ಟಿ, ಗುಗ್ರಿಪೇಟೆ ಮೂಲಕ ಹಾಯ್ದು ಭಾಗವಾನ್ ಪೇಟೆಗೆ ಬಂದು ತಲುಪಿತು.

ಈ ಸೌಹಾರ್ದತೆಯ ಸಂಭ್ರಮದ ಈದ್ ಮಿಲಾದ್ ಮೆರವಣಿಗೆಯಲ್ಲಿ ಇಸ್ಲಾಂ ಸಮಾಜದ ಧರ್ಮ ಗುರುಗಳಾದ ಅಲಾಮಾ ಅಬೂಬಕರ್ ಮುಫ್ತಿ ಸಕಾಫೆ ಅವರ ನೇತೃತ್ವದಲ್ಲಿ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಕಾಂಗ್ರೆಸ್ ಪಕ್ಷದ ಧುರಿನ ಹಾಗೂ ಸಮಾಜದ ಮುಖಂಡ ಮುಬಾರಕ್ ಮಂಗಳೂರು ಅವರು ಧರ್ಮ ಗುರುಗಳನ್ನು ಸನ್ಮಾನಿಸಿದರು. ಅದ್ದೂರಿ ಮೆರವಣಿಗೆಯಲ್ಲಿ ಸಮಾಜದ ಮುಖಂಡರಾದ ರಫಿಕ ಕಲಬುರ್ಗಿ, ಜಮೀರ್ ಮೌಲ್ವಿ, ಅಬ್ದುಲ್ ಜಿಲಾನಿ, ಹುಚ್ಚುಸಾಬ್ ಇಲಕಲ್, ಗೈಬುಸಾಬ ಡಂಗಿ, ಬಂದೇನವಾಜ್ ಕಲ್ಬುರ್ಗಿ, ಅಲ್ಲಾಭಕ್ಷ ದೋಟೆಗಾರ, ಅಲ್ತಾಫ್ ಸವರಾಜ್ ಒಳಗೊಂಡು ಸಮಾಜದ ಇನ್ನೂ ಅನೇಕ ಮುಖಂಡರು, ಹಿರಿಯರು, ಯುವಕರು ಸಂಭ್ರಮದ ಮೆರವಣಿಗೆಯಲ್ಲಿ ಭಾಗಿಯಾಗಿದ್ದರು.

# ಪೈಗಂಬರ್ ಜನ್ಮದಿನ ನಿಮಿತ್ತ ರಕ್ತದಾನ ಶಿಬಿರ



**ಕುಷ್ಟಗಿ :** ಪ್ರವಾದಿ ಮುಹಮ್ಮದ್ ಪೈಗಂಬರ್, ಸೂಫಿ ಸಂತರು, ದಾರ್ಶನಿಕರು, ದಾಸ ಶ್ರೇಷ್ಠರು ಈ ನಾಡಿಗೆ ನೀಡಿದ ಸಂದೇಶಗಳನ್ನು ಅಳವಡಿಸಿಕೊಂಡಿರುವ ಇಲ್ಲಿಯ ಜನರ ಭಾವೈಕ್ಯದ ಮತ್ತು ಭ್ರಾತೃತ್ವದ ಬದುಕು ಇತರೆ ಪ್ರದೇಶಗಳಿಗೆ ಮಾದರಿಯಾಗಿದೆ ಎಂದು ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

ಶುಕ್ರವಾರ ಇಲ್ಲಿ ಪಟ್ಟಣದ ತೆಗ್ಗಿನ ಓಣಿಯ ಹೈದರ ಅಲಿ ಸಮಿತಿ ಹಾಗೂ ಕೊಪ್ಪಳದ ಸಂಜೀವಿನಿ ರಕ್ತ ನಿಧಿ ಕೇಂದ್ರದ ವತಿಯಿಂದ ಪ್ರವಾದಿ ಮುಹಮ್ಮದ್ ಪೈಗಂಬರ್ ಜನ್ಮದಿನ ನಿಮಿತ್ತ ಏರ್ಪಡಿಸಿದ್ದ 5ನೇ ವರ್ಷದ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಇತರೆ ಪ್ರದೇಶಗಳಿಗೆ ಹೋಲಿಸಿದರೆ ಪಟ್ಟಣ ಹಾಗೂ ತಾಲ್ಲೂಕಿನಲ್ಲಿ ಹಿಂದೂ, ಮುಸ್ಲಿಂ, ಇತರೆ ಎಲ್ಲ ಸಮುದಾಯಗಳು ಸೌಹಾರ್ದತೆಯ ಬೆಳಕಿನ ದಾರಿಯಲ್ಲಿ ನಡೆಯುತ್ತಿರುವುದು ಇಲ್ಲಿಯ ಜನರ ಸೌಭಾಗ್ಯ. ಅದು ಮುಂದುವರಿಯಬೇಕು. ಈ ಕಾರಣದಿಂದಲೇ ಬೇರೆ ಕಡೆ ಏನೇ ಅಶಾಂತಿ ವಾತಾವರಣ ಉಂಟಾದರೂ ಇಲ್ಲಿ ಮಾತ್ರ ಶಾಂತಿ ಕದಡಿಲ್ಲ ಎಂಬುದನ್ನು ಹಿಂದಿನ ಇತಿಹಾಸದ ಪುಟಗಳನ್ನು ತಿರುವಿದಾಗ ತಿಳಿಯುತ್ತದೆ.ಮುಂದೆಯೂ ಸಹ ಯುವಕರು ಸೇರಿದಂತೆ ಭವಿಷ್ಯದ ಪೀಳಿಗೆಯವರು ಸರಿ ದಾರಿಯಲ್ಲಿ ನಡೆಯುವಂತಾಗಲು ಎಲ್ಲ ಸಮುದಾಯಗಳ ಹಿರಿಯರು ಸೂಕ್ತ ಮಾರ್ಗದರ್ಶನ ನೀಡಬೇಕು' ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಮರೇಗೌಡ ಬಯ್ಯಾಪುರ ಮಾತನಾಡಿ, 'ಕಲ್ಯಾಣದ ಬಸವಣ್ಣನವರ ಮತ್ತು ಮುಹಮ್ಮದ್ ಪೈಗಂಬರ್ ಅವರ ತತ್ವ ಮತ್ತು ಸಂದೇಶಗಳು ಒಂದೇ ಆಗಿದ್ದು ಮಾನವೀಯ ನೆಲೆಗಟ್ಟಿನಲ್ಲಿ ಸಾಮಾಜಿಕ ಸಾಮರಸ್ಯದಿಂದ ಬದುಕಲು ನೆರವಾಗುತ್ತವೆ. ಹೈದರಲಿ ಸಮಿತಿಯ ಯುವಕರು ರಕ್ತದಾನ ಶಿಬಿರ ನಡೆಸುವ ಮೂಲಕ ಸಮಾಜಕ್ಕೆ ಉತ್ತಮ ಕೊಡುಗೆ ನೀಡುತ್ತಿದ್ದಾರೆ. ಅಲ್ಲದೆ ಡಿಜೆ ಸದ್ದುಗದ್ದಲವಿಲ್ಲದೆ ಈದ್ ಮಿಲಾದ್ ಸಂದರ್ಭದಲ್ಲಿ ಶಾಂತಿಯಿಂದ ನಡೆಸಿದ ಮೆರವಣಿಗೆ ಇತರೆ ಸಮುದಾಯಗಳಿಗೆ ಮಾದರಿಯಾಗಬೇಕು' ಎಂದರು.

ಸಾನ್ನಿಧ್ಯ ವಹಿಸಿದ್ದ ಮದ್ದಾನಿ ಹಿರೇಮಠದ ಕರಿಬಸವ ಸ್ವಾಮೀಜಿ, 'ಪಟ್ಟಣದಲ್ಲಿ ಹಿಂದೂ ಮುಸ್ಲಿಂ ಸಮುದಾಯಗಳ ಯುವಕರು, ಜನರು ಎಲ್ಲ ಹಬ್ಬ ಹರಿದಿನಗಳಲ್ಲಿ ಪರಸ್ಪರ ಭಾಗವಹಿಸಿ ಆಚರಿಸುವ ಮೂಲಕ ಒಗ್ಗಟ್ಟು ಹಾಗೂ ಸೌಹಾರ್ದತೆಯ ಸಂದೇಶ ಬಿತ್ತರಿಸುತ್ತಿದ್ದಾರೆ. ಧಾರ್ಮಿಕ ಆಚರಣೆಗಳು ಏನೇ ಇದ್ದರೂ ಅವು ಸಮಾಜದ ಒಳಿತನ್ನು ಬಯಸುವಂತಿರಬೇಕು. ಮಾನವೀಯ ಮೌಲ್ಯ ಹೆಚ್ಚಿದರೆ ನಾಗರಿಕ ಸಮಾಜ ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತದೆ' ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ತುಂಗಭದ್ರಾ ಕಾಡಾ ಅಧ್ಯಕ್ಷ ಹಸನಸಾಬ್ ದೋಟಿಹಾಳ, ರೈತ ಮುಖಂಡ ನಜೀರಸಾಬ್ ಮೂಲಿಮನಿ, ಆರ್.ಟಿ.ಸುಬಾನಿ ಮಾತನಾಡಿದರು. ಶಿಕ್ಷಕ ಜೀವನಸಾಬ್ ವಾಲೀಕಾರ ಪ್ರವಾದಿ ಮುಹಮ್ಮದ್ ಅವರ ಬದುಕು ಹಾಗೂ ಜೀವನ ಸಂದೇಶ ಕುರಿತು ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ ಕಳೆದ ಐದು ದಶಕಗಳಿಂದಲೂ ಸಮಾಜದ ಯಾರೇ ಮೃತಪಟ್ಟರೂ ಗುಂಡಿ ತೆಗೆದು ದಫನ್ ಕೆಲಸದ ಸೇವೆಯಲ್ಲಿ ನಿರತರಾಗಿರುವ ಮುಸ್ಲಿಂ ಸಮಾಜದ ಹತ್ತು ಜನರನ್ನು ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ಪುರಸಭೆ ಅಧ್ಯಕ್ಷ ಮಹಾಂತೇಶ ಕಲಭಾವಿ, ಖಾಜಾ ಮೈನುದ್ದೀನ್ ಮುಲ್ಲಾ, ಮೆಹಬೂಬಸಾಬ್ ಕಮ್ಮಾರ, ಜಿ.ಕೆ.ಹಿರೇಮಠ, ಬಸವರಾಜ ನಾಯಕ, ಉಮೇಶ ಮಂಗಳೂರು, ಅಹ್ಮದ್ ಹುಸೇನ್ ಆದೋನಿ, ಎಚ್.ಆರ್.ಶೇಖ್ ಇದ್ದರು. ಬಸವರಾಜ ಗಾಣಿಗೇರ ಸ್ವಾಗತಿಸಿದರು.

# ಜೋಕುಮಾರಸ್ವಾಮಿಯ ಕಥೆ



ಜೀವನವೆಂದರೆ ಒಂದು ಆಶಾ ಭಾವನೆ, ನಂಬಿಕೆ ಹಾಗೂ ಪಂಚಭೂತಗಳೊಂದಿಗಿನ ಅವಿನಾಭಾವ ಸಂಬಂಧ . ಹಾಗಾಗಿಯೇ ನಮ್ಮ ದೇಶವು ಸಂಪ್ರದಾಯ ಹಾಗೂ ಶ್ರೇಷ್ಠ ಪರಂಪರೆಯ ಔನತ್ಯ ಹೊತ್ತ ದೇಶವಾಗಿದೆ.ಇಲ್ಲಿ ಪ್ರತಿ ಪ್ರದೇಶಕ್ಕೊಂದು ವೈಶಿಷ್ಟ್ಯ ಪೂರ್ಣ ಆಚರಣೆ , ಹಬ್ಬ , ಪರಂಪರೆಯ ನಡಾವಳಿಗಳನ್ನು ಹೊಂದಿರುವುದಾಗಿದೆ.

ಇಂತಹ ಒಂದು ವೈಶಿಷ್ಟತೆಗೆ ಹಿಡಿದ ಕನ್ನಡಿಯಂತೆ ನಮ್ಮ ಉತ್ತರ ಕರ್ನಾಟಕದ ಹಬ್ಬವಾಗಿರುವ "ಜೋಕುಮಾರನ ಹುಣ್ಣಿಮೆ" ಇದನ್ನು ಅನಂತನ ಹುಣ್ಣಿಮೆ ಅಂತಲೂ ಕರೆಯುತ್ತಾರೆ ಹಾಗಾದರೆ ! ಈ ಜೋಕುಮಾರಸ್ವಾಮಿಯ ಬಗ್ಗೆ ಇರುವ ಪೌರಾಣಿಕ ಹಾಗೂ ಜನಪದ ಕಥೆಗಳನ್ನೊಮ್ಮೆ ಮೆಲಕು ಹಾಕೋಣ . ಭಾದ್ರಪದ ಮಾಸದ ಅಷ್ಟಮಿಯಂದು ಜನಿಸಿ ಏಳು ದಿನಗಳ ಕಾಲ ಬದುಕಿದ ಅಲ್ಪಾಯುಷಿಯಾಗಿದ್ದಾನೆ ಈ ಜೋಕುಮಾರಸ್ವಾಮಿ. ಈ ಅವಧಿಯಲ್ಲಿಯೇ ಅವನ ಬಾಲ್ಯ , ಯೌವ್ವನ ಹಾಗೂ ಸಾವಿನ ಸ್ವಾರಸ್ಯಕರ ಆಚರಣೆಗಳು ನಡೆಯುತ್ತವೆ. ಪಾರ್ವತಿ ದೇವಿಯು ಗಣೇಶನನ್ನು ನಿರ್ಮಿಸಿದಂತೆಯೇ ಜೋಕುಮಾರಸ್ವಾಮಿಯನ್ನೂ ಮಣ್ಣಿನ ಮೂರ್ತಿ ಮಾಡಿ ಜೀವದಾನ ಮಾಡುತ್ತಾಳೆ. ಶಿವನ ಉಗ್ರವತಾರವನ್ನು ನೋಡಿ ಜೋಕುಮಾರನು ಹೆದರಿ ಪಾರ್ವತಿ ದೇವಿ ಹತ್ತಿರ ಓಡಿ ಬರುತ್ತಾನೆ , ಆಗ ದೇವಿಯು ನಾನು ನಿರ್ಮಿಸಿದ ಮಗ ಇಷ್ಟು ಹೇಡಿಯೇ! ಎಂದು ಅವನಿಗೆ ಶಾಪವನ್ನು ಹಾಕುತ್ತಾಳೆ. ನೀನು ಭೂಲೋಕದಲ್ಲಿ ಅಲ್ಪಾಯುಷಿಯಾಗಿ ಜನಿಸಿ ಜನರಿಂದ ಹೊಡೆಯಿಸಿಕೊಂಡು ಸಾಯುವೆ ಎಂದು ಹೇಳುತ್ತಾಳೆ. ಇದೇ ಸಮಯಕ್ಕೆ ಮಕ್ಕಳಿಗಾಗಿ ನೂರಾರು ಪೂಜೆಯನ್ನು ಮಾಡುತ್ತಿರುವ ಜೋಕಾಮುನಿ ಹಾಗೂ ಜೇಷ್ಠ ದೇವಿಯರಿಗೆ ವರ ಸಂತಾನವಾಗಿ ಈ ಜೋಕುಮಾರಸ್ವಾಮಿ ಜನ್ಮತಳೆಯುತ್ತಾನೆ. ಅಲ್ಪಾಯುಷಿಯಾದ ಇವನು ಬಾಲ್ಯದಲ್ಲಿ ಸಾಕಷ್ಟು ತುಂಟಾಟಗಳನ್ನು ಮಾಡುತ್ತಾ ಬೆಳೆಯುತ್ತಾನೆ ಇನ್ನೊಂದು ಕಡೆಯಲ್ಲಿ ಇವನನ್ನು ಮನ್ಮಥನ ಮಗನು ಎಂದು ಹೇಳುತ್ತಾರೆ , ಆದ್ದರಿಂದ ಇವನು ಕಾಮಚೇಷ್ಟೆಗಳನ್ನು ತುಂಬಾ ಮಾಡುತ್ತಿದ್ದನು ಎಂದು ಕೂಡ ತಿಳಿದು ಬರುತ್ತದೆ. ಒಮ್ಮೆ ಭೂಲೋಕದಲ್ಲಿ ಕಡು ಬರಗಾಲವಿದ್ದಾಗ ಕುದುರೆಯ ಮೇಲೆ ಸವಾರಿ ಮಾಡುತ್ತಿದ್ದ ಜೋಕುಮಾರನು ತಾನು ಹೊದ್ದಿರುವ ಶಾಲನ್ನು ಬೀಸಿ ಆಕಾಶದಲ್ಲಿರುವ ಮೋಡಗಳಿಗೆ ತಂಪು ತಗುಲಿಸಿ ಮಳೆ ಬರೆಸಿ ಬರಗಾಲವನ್ನು ಹೊಡೆದೋಡಿಸಿದ.ಅಂದಿನಿಂದ ರೈತರು ಈ ಸ್ವಾಮಿಯನ್ನು ಮಳೆರಾಯನೆಂದು ಪೂಜಿಸುತ್ತಾರೆ. ಹೀಗೆ ತುಂಟಾಟ ಮಾಡುತ್ತಿರುವಾಗ ಮಡಿವಾಳರ ಮಹಿಳೆಯ ಮೇಲೆ ಮೋಹವಾಗಿ ಅವಳನ್ನು ರೇಗಿಸಿದ್ದಕ್ಕಾಗಿ ಮಡಿವಾಳ ಜನಾಂಗವು ಇವನನ್ನು ಒನಕೆಯಿಂದ ಹೊಡೆದು ಸಾಯಿಸುತ್ತಾರೆ. ಸತ್ತ ಜೋಕುಮಾರನನ್ನು ಹಳ್ಳದಲ್ಲಿ ಎಸೆಯುತ್ತಾರೆ ಆಗ ಆ ಜೋಕುಮಾರನ ದೇಹವವು ಬೆಸ್ತರ, (ಗಂಗಾಮತಸ್ಥರ) ಕೈಯಲ್ಲಿ ಸಿಗುತ್ತದೆ. ಅವರು ಇವನನ್ನು ಶಿವನರೂಪವೆಂದು ತಿಳಿದು ಭೂಮಿಯ ಮೇಲಿನ ಬರಗಾಲ ಹೊಡೆದೋಡಿಸಿ ಮಳೆ ತರುವ ದೇವರಾಗಿದ್ದಾನೆ ಎಂದು ನಂಬಿ , ಇವನ ಮುಖವನ್ನು ಬುಟ್ಟಿಯಲ್ಲಿ ಇಟ್ಟುಕೊಂಡು ಊರುರು ಸುತ್ತುತ್ತಾ ಜೋಕುಮಾರಸ್ವಾಮಿಯ ಕಥೆಯನ್ನು ಹಾಡಿನ ಮೂಲಕ ಸಾರುತ್ತ ಸಾಗುವುದು ಗಂಗಾಮತಸ್ಥರ ಸಂಪ್ರದಾಯವಾಗಿದೆ.

ಈಗಲೂ ಕೂಡ ಈ ಜನಾಂಗದವರು ಗಣೇಶ ಹಬ್ಬ ಮುಗಿದ ತಕ್ಷಣ ಕುಂಬಾರನ ಮನೆಯಲ್ಲಿ ಜೋಕುಮಾರಸ್ವಾಮಿಯ ಮೂರ್ತಿಯನ್ನು ಮಾಡಿಸಿಕೊಂಡು ಒಂದು ಬುಟ್ಟಿಯಲ್ಲಿ ಇಟ್ಟುಕೊಂಡು ಆ ಮೂರ್ತಿಯ ಸುತ್ತಲೂ ಬೇವಿನ ಎಲೆಯನ್ನು ಹರಡಿಕೊಂಡು ದೀಪ ಧೂಪದೊಂದಿಗೆ ಊರೂರು ಸುತ್ತಿ ಸ್ವಾಮಿಯ ಪವಾಡವನ್ನು ಹಾಡುತ್ತ ಸಾಗುವುದು ಒಂದು ಸಂಪ್ರದಾಯ.

**ಅಡ್ಡಡ್ಡ ಮಳೆ ಬಂದು**
**ದೊಡ್ಡ ದೊಡ್ಡ ಹನಿಯಾಗಿ**
**ಗೊಡ್ಡು ಗೋವುಗಳೆಲ್ಲಾ ಹೈನಾಗಿ**
**ಜೋಕುಮಾರ !**
**ಗೊಡ್ಡು ಗೋವುಗಳೆಲ್ಲಾ ಹೈನಾಗಿ**
**ಕುಮುರಯ್ಯ**
**ದೊಡ್ಡೋರ ಮ್ಯಾಲ್ ಸಿರಿ ಬಂದ**
**ಜೋಕುಮಾರ !**

* * *

**ಬಲ ಬಂದ ನಿಮ್ಮ**
**ಬಾಗುಲದಾಗ ನಿಂತಾನ್**
**ಬೇಗ ನೀಡವ್ವ ಕೊಡುರವ್ವ**
**ಜೋಕುಮಾರ !**
**ಬೇಗ ನೀಡವ್ವ ಕೊಡುರವ್ವ**
**ಬಾಗಿಲಾಗ ಹರಕಿ ಕೊಡುತಾನ**
**ಜೋಕುಮಾರ !**

ಹೀಗೆ ಓಣಿ ತುಂಬೆಲ್ಲ ಜನರನ್ನು ಸೇರಿಸಿ ಜೋಕುಮಾರಸ್ವಾಮಿಯ ಕಥೆಯನ್ನು ಸಾರುತ್ತಾರೆ. ಓಣಿಯ ಜನರೆಲ್ಲಾ ಬಂದು ಈ ಸ್ವಾಮಿಗೆ ಎಣ್ಣೆ ,ಬೆಣ್ಣೆ , ದವಸಧಾನ್ಯಗಳನ್ನು ನೀಡಿ ಸಂಕಲ್ಪ ಮಾಡಿಕೊಳ್ಳುತ್ತಾರೆ. ಬುಟ್ಟಿಯಲ್ಲಿರುವ ಬೇವಿನ ಸೊಪ್ಪು ಹಾಗೂ ದವಸ ಧಾನ್ಯಗಳನ್ನು ಮರಳಿ ಪಡೆದು ತಮ್ಮ ಹೊಲಗಳಿಗೆ ರೈತರು ಚರಗ ಚೆಲ್ಲುತ್ತಾರೆ.ಇದರಿಂದ ಅವರ ಹೊಲಗಳು ಸಮೃದ್ಧವಾಗಿ ಬೆಳೆಯುವವು ಎಂಬ ನಂಬಿಕೆ ಇದೆ. ಹೀಗೆ ಜೋಕುಮಾರಸ್ವಾಮಿಯನ್ನು ಏಳನೇ ದಿನ ಊರ ಮುಂದಿನ ಗುಡಿಯ ಮುಂದೆ ಕೂಡಿಸಿ ಕಡೆಯ ಪೂಜೆಯನ್ನು ಮಾಡಿ ಒನಕೆಯಿಂದ ಮೂರ್ತಿಯನ್ನು ಒಡೆದು ಸಾಯಿಸುತ್ತಾರೆ. ನಂತರ ಅದರ ತುಂಡಾದ ಭಾಗಗಳನ್ನು ಹಳ್ಳದ ಕಲ್ಲುಗಳ ಸಂಧಿಯಲ್ಲಿ ಮುಚ್ಚಿಡುವರು. ಈ ಅನಂತನ ಹುಣ್ಣಿಮೆಯು ಈ ಭಾಗದ ಜನರಿಗೆ ಸೂತಕದ ಹುಣ್ಣಿಮೆ ಆದ್ದರಿಂದ ಈ 15 ದಿನಗಳಲ್ಲಿ ಇಲ್ಲಿಯ ಜನರು ಯಾವುದೇ ಶುಭ ಕಾರ್ಯಗಳನ್ನು ಮಾಡುವುದಿಲ್ಲ.



**–ಅಶ್ವಿನಿ ಅಂಗಡಿ**
**ಬದಾಮಿ**

# ಜಗಜ್ಯೋತಿ ಕಲಾ ವೃಂದ ಡೊಂಬಿವಲಿ: ಶ್ರೀಮತಿ ಸುಶೀಲಾ ಸೀತಾರಾಮ ಶೆಟ್ಟಿ ಸ್ಮಾರಕ 27 ನೇ ವಾರ್ಷಿಕ ಕಥಾ ಹಾಗೂ ಕಾವ್ಯ ಪ್ರಶಸ್ತಿಗೆ ಆಹ್ವಾನ

**ಡೊಂಬಿವಲಿ :** ಮುಂಬಯಿ ಮಹಾನಗರ ಹಾಗೂ ಉಪನಗರಗಳಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಹಾಗೂ ಕಲೆಯ ರಾಯಭಾರಿಯಂತೆ ಕಾರ್ಯ ನಿರ್ವಹಿಸುತ್ತಿರುವ ಜಗಜ್ಯೋತಿ ಕಲಾ ವೃಂದದ 2025 ನೇ ವರ್ಷದ ಸಮಸ್ತ ಕನ್ನಡದ ಮಹಿಳೆಯರಿಗಾಗಿ ನೀಡಲ್ಪಡುವ ಶ್ರೀಮತಿ ಸುಶೀಲಾ ಸೀತಾರಾಮ ಶೆಟ್ಟಿ ಸ್ಮಾರಕ ಕಥಾ ಹಾಗೂ ಕಾವ್ಯ ಪ್ರಶಸ್ತಿಗಾಗಿ ಆಹ್ವಾನಿಸಲಾಗಿದ್ದು, ಆಯ್ಕೆಯಾದ ಎರಡು ವಿಭಾಗಗಳಲ್ಲೂ ಪ್ರತ್ಯೇಕವಾಗ ಪ್ರತ್ಯೇಕವಾಗಿ ಹತ್ತು ಸಾವಿರ ರೂ ನಗದು ಬಹುಮಾನ ಪ್ರಶಸ್ತಿ ಫಲಕ ಹಾಗೂ ಪ್ರಶಸ್ತಿ ಪತ್ರಗಳನ್ನು ಒಳಗೊಂಡಿದೆ.

ಸ್ಪರ್ಧೆಯ ನಿಯಮಗಳು– ಈ ಸ್ಪರ್ಧೆ ರಾಷ್ಟ್ರಮಟ್ಟದ ಸಮಸ್ತ ಕನ್ನಡ ಮಹಿಳೆಯರಿಗಾಗಿ ಇದೆ.ಪ್ರಕಟನೆಗೆ ಸಿದ್ದವಾದ ಕಥಾ ಹಾಗೂ ಕಾವ್ಯ ಸಂಕಲನ ಆಗಿರಬೇಕು,ಒಬ್ಬರೆ ಎರಡೂ ಸ್ಪರ್ಧೆಗಳಲ್ಲಿ ಭಾಗವಹಿಸ ಬಹುದು.

ಕಥೆ ಹಾಗೂ ಕವಿತೆಗಳನ್ನು ಕಾಗದದ ಒಂದೆ ಮಗ್ಗುಲಲ್ಲಿ ಸ್ಫುಟವಾಗಿ ಬರೆದಿರ ಬೇಕು/ಟಾಯಿಪ್ ಮಾಡಿರಬೇಕು.ಕಾರ್ಬನ್, ಝೆರಾಕ್ಸ ಹಾಗೂ ಪ್ರಕಟಗೊಂಡ ಕಾಗದದ ಪ್ರತಿಗಳನ್ನು ಸ್ವೀಕರಿಸಲಾಗುವದಿಲ್ಲಾ. ಕಥಾ ಪ್ರಶಸ್ತಿಗೆ ಹಸ್ತ ಪ್ರತಿಯು ಫುಲ್ ಸ್ಕೇಪ್ ಕಾಣದ್ದನ್ನು 100 ರಿಂದ 130 ಪುಟಗಳ ಮಿತಿಯಲ್ಲಿ ಇರಬೇಕು. ಕವನ ಸಂಕಲನದಲ್ಲಿ ಕನಿಷ್ಠ 30 ಕವಿತೆಗಳು ಇರಬೇಕು. ಖಂಡಕಾವ್ಯ, ಚುಟುಕು ಹಾಗೂ ಹನಿಗವನ ಕವಿತೆಯಾಗಿರ ಬಾರದು.ಹಸ್ತ ಪ್ರತಿಯಲ್ಲಿ ಹೆಸರು ನಮೂದಿಸಬಾರದು. ಹೆಸರು ವಿಳಾಸ, ಪರಿಚಯ, ದೂರವಾಣಿ ಸಂಖ್ಯೆ ಹಾಗೂ ಇತ್ತೀಚಿನ ಭಾವಚಿತ್ರವನ್ನು ಹಸ್ತ ಪ್ರತಿಯೊಂದಿಗೆ ಇಡಬೇಕು. ಪ್ರವೇಶ ಶುಲ್ಕ ಇರುವುದಿಲ್ಲ. ಸ್ಪರ್ಧೆಗೆ ಬಂದ ಕೃತಿಗಳನ್ನು ಹಿಂದಿರುಗಿಸಲಾಗುವದಿಲ್ಲಾ. ಪ್ರಶಸ್ತಿ ಪಡೆದ ಪ್ರತಿಗಳನ್ನು ಮುದ್ರಿಸುವಾಗ ರಕ್ಷಾ ಪುಟದ ಮೇಲ್ಗಡೆ ಹಾಗೂ ಪ್ರಥಮ ಒಳಪುಟದಲ್ಲಿ ಜಗಜ್ಯೋತಿ ಕಲಾ ವೃಂದದ ಶ್ರೀಮತಿ ಸುಶೀಲಾ ಸೀತಾರಾಮ ಶೆಟ್ಟಿ ಸ್ಮಾರಕ ಕಥಾ/ ಕವಿತಾ ಪ್ರಶಸ್ತಿ ವಿಜೇತ ಕೃತಿ 2025 ಎಂದು ಮುದ್ರಿಸುವದು ಅವಶ್ಯ. ಪ್ರಶಸ್ತಿ ಪ್ರದಾನ ಸಮಾರಂಭವು ವೃಂದದ ವಾರ್ಷಿಕೋತ್ಸವದ ದಿನದಂದು ಜರಗುಲಿದ್ದು, ಪ್ರಶಸ್ತಿ ವಿಜೇತರಿಗೆ ದೂರವಾಣಿ/ಪತ್ರದ ಮೂಲಕ ಸಂಪರ್ಕಿಸಲಾಗುವದು. ಒಮ್ಮೆ ಒಂದು ವಿಭಾಗದಲ್ಲಿ ಪ್ರಶಸ್ತಿಯನ್ನು ಪಡೆದವರು ಮತ್ತೆ ಅದೆ ವಿಭಾಗದ ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲಾ.

ಸ್ಪರ್ಧೆಯ ಬಗ್ಗೆ ಯಾವುದೇ ತೀರ್ಮಾನವನ್ನು ಕೈಗೊಳ್ಳುವ ತೀರ್ಮಾನವನ್ನು ವೃಂದವು ಕಾಯ್ದಿರಿಸಿಕೊಂಡಿದ್ದು, ಅನಾವಶ್ಯಕ ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ, ನಿರ್ಣಾಯಕರ ನಿರ್ಣಯವೇ ಅಂತಿಮ. ಕೃತಿಗಳನ್ನು ಸ್ವಿಕರಿಸು ಕೊನೆಯ ದಿನಾಂಕ 31–10–2025 ಇದ್ದು, ಕೃತಿಗಳನ್ನು ಈ ಕೆಳಗಿನ ವಿಳಾಸಕ್ಕೆ ವಿಳಾಸವನ್ನು ಇಂಗ್ಲೀಷನಲ್ಲಿ ಸ್ಪಷ್ಟವಾಗಿ ಬರೆದು ಕಲಿಸಬೇಕು.

Shri. Sukumar N Shetty.
C/o S .N.Shetty Associates,Ground floor, Room No 5.Neelkanth Sagar CHS,Mahatma Phule Road,Opposite Jadhav wadi, Dombivli West 4212021.
Email:mail.sukumar@yahu.in

ಹೆಚ್ಚಿನ ಮಾಹಿತಿಗಾಗಿ ಸಂತೋಷ ಪಿ ಶೆಟ್ಟಿ ಮೋಬಾಯಿಲ್ ಸಂಖ್ಯೆ –9892110826/9868824709 Email address santoshpshetty@gmail.com ಅಥವಾ ವಸಂತ ಸುವರ್ಣ ಮೋಬಾಯಿಲ್ ಸಂಖ್ಯೆ 9892833623 ಮೂಲಕ ಸಂಪರ್ಕಿಸ ಬಹುದು ಎಂದು ಜಗಜ್ಯೋತಿ ಕಲಾ ವೃಂದ ಪ್ರಕಟನೆಯಲ್ಲಿ ತಿಳಿಸಿದೆ.

# ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾದ ಕುಷ್ಟಗಿ ಮೂವರು ಶಿಕ್ಷಕರು



**ಕುಷ್ಟಗಿ :** ಶಿಕ್ಷಣ ಕ್ಷೇತ್ರದ ಬೆಳವಣಿಗೆ ಹಾಗೂ ಮಕ್ಕಳ ಶೈಕ್ಷಣಿಕ ಪ್ರಗತಿ ವಿಷಯದಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ಗುರುತಿಸಿಕೊಂಡಿರುವ ತಾಲ್ಲೂಕಿನ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಕರು ಈ ಬಾರಿಯ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.ಲಿಂಗದಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯ ಆನಂದ ಸೊಬಗಿನ, ವಿಠಲಾಪುರ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಶರಬಣ್ಣ ಬಿಜಕಲ್ ಮತ್ತು ಕಂದಕೂರು ಪ್ರೌಢಶಾಲೆಯ ಶಿಕ್ಷಕ ಬಸವರಾಜ ಗುರಿಕಾರ ಪ್ರಶಸ್ತಿಗೆ ಆಯ್ಕೆಯಾದವರು. ಕೊಪ್ಪಳದಲ್ಲಿ ಸೆ.6ರಂದು ಜಿಲ್ಲಾಡಳಿತ ಭವನದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಆನಂದ ಸೊಬಗಿನ ಲಿಂಗದಹಳ್ಳಿಯ ಶಾಲೆಯ ಅಚ್ಚುಮೆಚ್ಚಿನ ಶಿಕ್ಷಕ. ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ತಕ್ಕಂತೆ ಅಪ್‌ಡೇಟ್ ಆಗಿರುವ ಆನಂದ ಅವರು ಶಿಕ್ಷಣ ಇಲಾಖೆ, ಇತರೆ ಶಿಕ್ಷಕರು ಮತ್ತು ಸಮುದಾಯದ ಸಹಕಾರದೊಂದಿಗೆ ಬೋಧನೆಯಲ್ಲಿ ಸ್ಮಾರ್ಟ್ ಕ್ಲಾಸ್ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಗುಣಮಟ್ಟದಶಿಕ್ಷಣನೀಡುತ್ತಿದ್ದಾರೆ.ಶಾಲೆಯ ಒಳನೋಟವಷ್ಟೇ ಅಲ್ಲ ಬಾಹ್ಯದಲ್ಲೂ ಗಮನ ಸೆಳೆಯುವಲ್ಲಿ ಈ ಶಿಕ್ಷಕರದು ಮುಖ್ಯ ಪಾತ್ರ. ಖಾಸಗಿ ಸಂಸ್ಥೆಯೊಂದರ ಅಂದಾಜು 70 ಲಕ್ಷ ಆರ್ಥಿಕ ನೆರವಿನೊಂದಿಗೆ ಸುಸಜ್ಜಿತ ಕಟ್ಟಡ ನಿರ್ಮಾಣಗೊಂಡಿದೆ. ಬಹಳಷ್ಟು ಮಕ್ಕಳು ಎನ್‌ಎನ್‌ಎಂಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಮೂಲಕ ಐದು ವರ್ಷಗಳವರೆಗೆ ಪ್ರತಿವರ್ಷ ತಲಾ ?12 ಸಾವಿರದಂತೆ ಶಿಷ್ಯವೇತನಕ್ಕೆ ಅರ್ಹತೆ ಪಡೆದಿರುವುದು ಮತ್ತೊಂದು ವಿಶೇಷ. 'ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯಬೇಕು, ಭವಿಷ್ಯದಲ್ಲಿ ಅವರೂ ನಾಡಿಗೆ ಉತ್ತಮ ಕೊಡುಗೆ ನೀಡುವಂತಾಗಲಿ ಎಂಬ ಆಶಯ, ತುಡಿತ ಆನಂದ ಅವರದು' ಎನ್ನುತ್ತಾರೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ನಿಂಗಪ್ಪ ಗುನ್ನಾಳ.

ಶರಬಣ್ಣ ಬಿಜಕಲ್, ವಿಠಲಾಪುರ ಕಿರಿಯ ಪ್ರಾಥಮಿಕ ಶಾಲೆಯ ಕ್ರಿಯಾಶೀಲ ಶಿಕ್ಷಕ. ಪಾಠ, ಆಟದ ಜೊತೆಗೆ ಮಕ್ಕಳಲ್ಲಿ ಕಲಿಕೆಯಲ್ಲಿ ಉತ್ಸಾಹ ಮತ್ತು ಉಲ್ಲಸಿತರಾಗಿರುವುದಕ್ಕೆ ಸಾಧ್ಯವಿರುವ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತ ಬಂದಿದ್ದಾರೆ. ಮಕ್ಕಳು ಶಾಲೆಯಿಂದ ಹೊರಗೆ ಉಳಿಯದ ಶೈಕ್ಷಣಿಕ ಮುಖ್ಯವಾಹಿನಿಗೆ ಬರಬೇಕು ಎನ್ನುವ ಕಳಕಳಿ ಹೊಂದಿರುವ ಶರಬಣ್ಣ ಮನೆ ಮನೆಗೆ ಹೋಗಿ ಪಾಲಕರು, ಮಕ್ಕಳ ಮನಪರಿರ್ತಿಸಿ ಪುನಃ ಶಾಲೆಗೆ ಕರೆತಂದು ಹಾಜರಾತಿ ಹೆಚ್ಚಿಸುವಲ್ಲಿ ಮಾದರಿ ಪ್ರಯತ್ನ ಮಾಡುತ್ತ ಬಂದವರು.

ಸರ್ಕಾರದಿಂದ ಬಂದಿರುವ ಸ್ಮಾರ್ಟ್ ಕ್ಲಾಸ್ ವ್ಯವಸ್ಥೆಯ ಮೂಲಕ ಪಾಠ ಬೋಧನೆಯಲ್ಲಿ ತೊಡಗಿ ಮಕ್ಕಳಲ್ಲಿ ಆಸಕ್ತಿ ಅರಳಿಸುವಲ್ಲಿ ಮುತುವರ್ಜಿ ವಹಿಸುತ್ತಿದ್ದಾರೆ ಎನ್ನುತ್ತಾರೆ ಅವರ ಸಹವರ್ತಿ ಶಿಕ್ಷಕರು. ಪಾಠವಷ್ಟೇ ಅಲ್ಲ ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಿ ದೈಹಿಕವಾಗಿಯೂ ಸದೃಢಗೊಳಿಸವಲ್ಲಿ ಪ್ರಯತ್ನಿಸುತ್ತಿದ್ದಾರೆ. ವಸತಿ ಶಾಲೆಗಳಿಗೆ ಪ್ರವೇಶ ಪರೀಕ್ಷೆಗೆ ಮಕ್ಕಳನ್ನು ಸಿದ್ಧಪಡಿಸಿ ಅನೇಕ ಮಕ್ಕಳು ವಸತಿ ಶಾಲೆಗೆ ಪ್ರವೇಶ ಪಡೆಯುವಲ್ಲಿ ಈ ಶಿಕ್ಷಕರ ಪ್ರಯತ್ನ ಮೆಚ್ಚುವಂಥದ್ದು.

ಬಸವರಾಜ ಗುರಿಕಾರ ಕಂದಕೂರಿನ ಪ್ರೌಢಶಾಲೆಯ ಆಂಗ್ಲಭಾಷಾ ಶಿಕ್ಷಕ. ಮೂರು ದಶಕಗಳಿಂದಲೂ ಶಿಕ್ಷಕ ಸೇವೆಯಲ್ಲಿದ್ದಾರೆ. ಮೂಲತಃ ಬಡ ಕುಟುಂಬದಲ್ಲಿ ಬೆಳೆದ ಬಸವರಾಜ ಅಂಥ ಕಷ್ಟಗಳು ತಮ್ಮ ಕಣ್ಮುಂದಿರುವ ಮಕ್ಕಳಿಗೆ ಬರಬಾರದು ಎಂದು ವಿವಿಧ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ನೆರವಾಗುತ್ತಿದ್ದಾರೆ. ಪ್ರತಿವರ್ಷ ರಾಷ್ಟ್ರೋತ್ಥಾನ ಸಂಸ್ಥೆಯವರು ನಡೆಸುವ ಪರೀಕ್ಷೆಗೆ ಮಕ್ಕಳನ್ನು ತಯಾರು ಮಾಡಿ ಅನೇಕ ಮಕ್ಕಳಿಗೆ ಉಚಿತ ಶಿಕ್ಷಣ ದೊರೆಯುವಂತೆ ನೋಡಿಕೊಂಡಿದ್ದಾರೆ. ಅನೇಕ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಲ್ಲಿ ಸಾಧನೆಗೈದಿದ್ದಾರೆ.

ಕಬ್ಬಿಣದ ಕಡಲೆ ಅಂತಿರುವ ಇಂಗ್ಲಿಷ್ ಅನ್ನು ಹಿಂದುಳಿದ ಮಕ್ಕಳಿಗೂ ಮನಮುಟ್ಟುವ ರೀತಿಯಲ್ಲಿ ಸ್ಮಾರ್ಟ್ ಕ್ಲಾಸ್‌ಗಳನ್ನು ಬಳಸಿಕೊಂಡು ಬೋಧನೆಯ ವಿವಿಧ ವೈವಿಧ್ಯಮಯಕೌಶಲಗಳನ್ನುಬಳಸಿಕೊಂಡು ಮಕ್ಕಳಿಗೆ ಆತ್ಮಸ್ಥೈರ್ಯದ ಮೂಲಕ ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಸಹಿತ ತರಗತಿಯಲ್ಲಿ ತೊಡಗಿಸಿಕೊಂಡಿರುವುದು ವಿಶೇಷ. ಮಕ್ಕಳಲ್ಲಿ ಶಿಸ್ತು, ಸಹನೆ, ಶಾಂತಿ, ಸಹಬಾಳ್ವೆ, ರಾಷ್ಟ್ರಪ್ರೇಮ, ಭಾವೈಕ್ಯ, ಸಹೋದರತ್ವ ಮೂಡಿಸುವ ನಿಟ್ಟಿನಲ್ಲಿ ಒಬ್ಬ ಸ್ಕೌಟ್ ಮಾಸ್ತರಾಗಿಯೂ ಉತ್ತಮ ಪ್ರಯತ್ನ ಮಾಡಿದ್ದಾರೆ.

ಕೇವಲ ಶಾಲಾ ಅವಧಿಯಲ್ಲಷ್ಟೇ ಅಲ್ಲ ನಂತರವೂ ವಿಶೇಷ ತರಗತಿಗಳನ್ನು ನಡೆಸುವ ಮೂಲಕ ಉತ್ತಮ ಫಲಿತಾಂಶ ದೊರಕಿಸಿಕೊಡುವ ನಿಟ್ಟಿನಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿದ್ದಾರೆ ಎನ್ನುತ್ತಾರೆ ಮಕ್ಕಳು.

# ಆರೋಗ್ಯ ಕೇಂದ್ರದ ಕಟ್ಟಡ ಶಂಕುಸ್ಥಾಪನೆ ಮಾಡಿದ ಸಿಎಂ ಆರ್ಥಿಕ ಸಲಹೆಗಾರ



**ಯಲಬುರ್ಗಾ :** ತಾಲ್ಲೂಕಿನ ಬಂಡಿಹಾಳ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಭವನ ನಿರ್ಮಾಣದ ಶಂಕುಸ್ಥಾಪನೆಯನ್ನು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ನೆರವೇರಿಸಿದರು.

ನಂತರ ಮಾತನಾಡಿದ ಅವರು, 'ಗ್ರಾಮದಲ್ಲಿ 4 ಕೋಟಿ ವೆಚ್ಚದಲ್ಲಿ ಆರೋಗ್ಯ ಕೇಂದ್ರ, 60 ಲಕ್ಷ ವೆಚ್ಚದಲ್ಲಿ ಸಮುದಾಯಭವನ ನಿರ್ಮಾಣಗೊಳ್ಳಲಿದೆ.

ಗುಣಮಟ್ಟದ ಕಾಮಗಾರಿ ಮಾಡಲು ಗುತ್ತಿಗೆದಾರರು ಕಾಳಜಿ ವಹಿಸಬೇಕು.

ಹಾಗೆಯೇ ಗ್ರಾಮಸ್ಥರು ಕೂಡಾ ನಿಗಾವಹಿಸಿ ಉತ್ತಮ ಕಾಮಗಾರಿಯಾಗುವಂತೆ ನೋಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ತಾಲ್ಲೂಕಿನಲ್ಲಿ ಮಾದರಿ ಕೌಶಲಾಭಿವೃದ್ಧಿ ಕೇಂದ್ರ ನಿರ್ಮಾಣಕ್ಕೆ ಚಿಂತನೆ ನಡೆದಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಚಿವರೊಂದಿಗೆ ಚರ್ಚಿಸಿ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು. ಇದೇ ವರ್ಷದಿಂದ ನರ್ಸಿಂಗ್ ಕಾಲೇಜು ಪ್ರಾರಂಭಗೊಳ್ಳಲಿದೆ' ಎಂದರು.

ಕುಕನೂರು ಮತ್ತು ಯಲಬುರ್ಗಾ ತಾಲ್ಲೂಕು ವ್ಯಾಪ್ತಿಯ

ವಿವಿಧ ಗ್ರಾಮಗಳಲ್ಲಿ ಆರೋಗ್ಯ ಕೇಂದ್ರಗಳು, ಸಮುದಾಯ ಭವನ, ಹೆಚ್ಚುವರಿ ಶಾಲಾ ಕೊಠಡಿ, ಪಶು ಸಂಗೋಪನೆ ಕೇಂದ್ರಗಳು ಹಾಗೂ ಹೈಸ್ಕೂಲ್ ಮಂಜೂರಾತಿ ಮಾಡಿಸಿದ್ದರಿಂದ ಗ್ರಾಮೀಣ ಪ್ರದೇಶದ ಸಮಗ್ರ ಅಭಿವೃದ್ಧಿ ಸಾಧ್ಯವಾಗಲಿದೆ' ಎಂದು ಅಭಿಪ್ರಾಯಪಟ್ಟರು.

ವೈದ್ಯಾಧಿಕಾರಿ ನೇತ್ರಾ ಹಿರೇಮಠ, ಅನಿಲ್ ಪಾಟೀಲ, ಗ್ಯಾರಂಟಿ ಸಮಿತಿಯ ಸುಧೀರ ಕೊರ್ಲಳ್ಳಿ, ವೀರನಗೌಡ

ಪೊಲೀಸ್‌ಪಾಟೀಲ, ಶೇಖರಗೌಡ ಉಳ್ಳಾಗಡ್ಡಿ, ಕೆರಿಬಸಪ್ಪ ನಿಡಗುಂದಿ, ಶರಣಪ್ಪ ಗಾಂಜಿ, ಈರಪ್ಪ ಕುಡಗುಂಟಿ, ಬಸವರಾಜ ನಿಡಗುಂದಿ, ಮಲ್ಲು ಜಕ್ಕಲಿ, ರಹಿಮಾನಸಾಬ ನಾಯಕ, ಪುನಿತ್ ಕೊಪ್ಪಳ ಇದ್ದರು.

# ಮುಸ್ಲಿಂರಿಂದ ಗಣೇಶ ಮೂರ್ತಿ ಪೂಜೆ: ಹಿಂದೂಗಳಿಂದ ಈದ್‌ಗೆ ಅನ್ನಸಂತರ್ಪಣೆ

**ಕೊಪ್ಪಳ :** ನಗರದಲ್ಲಿ ಶುಕ್ರವಾರ ನಡೆದ ಮುಹಮ್ಮದ್ ಪೈಗಂಬರರ ಜಯಂತ್ಯುತ್ಸವದ ಮೆರವಣಿಗೆ ವೇಳೆ ಮುಸ್ಲಿಮರು ಇಲ್ಲಿನ ಗಡಿಯಾರ ಕಂಬದ ಗಜಾನನ ಮಿತ್ರ ಮಂಡಳಿಯ ಗಣೇಶ ಮೂರ್ತಿಗೆ ಪೂಜೆ ಸಲ್ಲಿಸಿದರು.

ಮೆರವಣಿಗೆಯ ಜೊತೆಗೆ ಬಂದ 7ನೇ ವಾರ್ಡಿನ ವಾಹೀದ್ ಸೋಂಪೂರ್ ಮತ್ತು ಸಂಗಡಿಗರು ಗಣಪತಿ ಪ್ರತಿಷ್ಠಾಪಿಸಿದ್ದ ಸ್ಥಳಕ್ಕೆ ಭೇಟಿ ನೀಡಿ, ಹೂವಿನ ಹಾರ ಹಾಕಿ, ಆರತಿ ಬೆಳಗಿ ಪೂಜೆ ಸಲ್ಲಿಸಿದರು.

ಬಳಿಕ ಪ್ರಸಾದ ಸೇವಿಸಿ, ಪರಸ್ಪರರು ಹಬ್ಬಕ್ಕೆ ಶುಭಾಶಯವ ವಿನಿಮಯ ಮಾಡಿಕೊಂಡರು. ಸ್ಥಳದಲ್ಲಿದ್ದ ಅಜ್ಜಪ್ಪ ಸ್ವಾಮಿ ಮತ್ತು ಸಿದ್ದಪ್ಪಜ್ಜ ಹಿರೇಮಠ ಪೂಜೆ ಕೈಗೊಳ್ಳಲು ಸಹಕಾರ ನೀಡಿದರು.

'ಕೊಪ್ಪಳಕಾಯುವರಾಜ'ಗಣಪತಿ ಮಂಡಳಿಯವರು ಗಾಂಧಿ ವೃತ್ತದ ಬಳಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಮುಸ್ಲಿಮರಿಗಾಗಿ ಅನ್ನ ಸಂತರ್ಪಣೆಯನ್ನು ಏರ್ಪಡಿಸಿದ್ದರು. ಮುಸಲ್ಮಾನರಿಗೆ ಪಲಾವ್, ಸೋನ್ ಪಾಪಡಿ ನೀಡಿ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.ಹಿಂದೂ ಮುಸ್ಲಿಮರ ಈ ಸೌಹಾರ್ದದ ನಡೆಗೆ ಸಾರ್ವಜನಿಕರಿಂದ ಹಾಗೂ ಪೊಲೀಸರಿಂದ ಮೆಚ್ಚುಗೆ ವ್ಯಕ್ತವಾಯಿತು.



# ಅಂಜನಾದ್ರಿ ಅಭಿವೃದ್ಧಿ ಹೇಳಿಕೆಗೆ ಸೀಮಿತವಾಗದಿರಲಿ: ಪರಣ್ಣ ಮುನವಳ್ಳಿ



**ಗಂಗಾವತಿ :** ತಾಲ್ಲೂಕಿನ ಅಂಜನಾದ್ರಿ ಅಭಿವೃದ್ಧಿ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರು ಅಧಿಕಾರಿಗಳೊಂದಿಗೆ ಸಭೆ ನಡೆಸಿರುವುದು ಸ್ವಾಗತಾರ್ಹ. ಆದರೆ ಅಂಜನಾದ್ರಿ ಅಭಿವೃದ್ಧಿ ಹೇಳಿಕೆಗೆ ಸೀಮಿತವಾಗದಿರಲಿ ಎಂದು ಮಾಜಿ ಶಾಸಕ ಪರಣ್ಣ ಮುನವಳ್ಳಿ ಹೇಳಿದ್ದಾರೆ.

ಹನುಮನ ಜನ್ಮಸ್ಥಳ ಅಂಜನಾದ್ರಿ ಅಭಿವೃದ್ಧಿ ತುರ್ತಾಗಿ ಆಗಬೇಕಿದೆ. ಅಂಜನಾದ್ರಿಗೆ ನಿತ್ಯ ಸಾವಿರಾರು ಜನ ಭಕ್ತರು ಭೇಟಿ ನೀಡುತ್ತಿದ್ದಾರೆ. ಆದರೆ ಇಲ್ಲಿ ಅಗತ್ಯ ಸೌಕರ್ಯಗಳಿಲ್ಲ. ಇದರಿಂದ ಭಕ್ತರು ಸಮಸ್ಯೆ ಎದುರಿಸುತ್ತಿದ್ದಾರೆ. ಈ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ ಅಂಜನಾದ್ರಿ ಅಭಿವೃದ್ಧಿಗೆ 120 ಕೋಟಿ ಅನುದಾನ ನೀಡಲಾಗಿತ್ತು. ಆ ಹಣದಲ್ಲಿಯೇ ಈಗ ಕೆಲ ಅಭಿವೃದ್ಧಿ ಕಾರ್ಯಗಳು ಜರುಗುತ್ತಿವೆ' ಎಂದು ತಿಳಿಸಿದ್ದಾರೆ.

ಇಂದಿನ ರಾಜ್ಯ ಸರ್ಕಾರ ಮೊದಲ ಬಜೆಟ್‌ನಲ್ಲಿ ಅಂಜನಾದ್ರಿ ಅಭಿವೃದ್ಧಿಗೆ 100 ಕೋಟಿ ಅನುದಾನ ಘೋಷಣೆ ಮಾಡಿ, ಈವರೆಗೆ ನಯಾಪೈಸೆ ಹಣ ಬಿಡುಗಡೆ ಮಾಡಿಲ್ಲ.

ಹಾಗಾಗಿ ರಾಜ್ಯ ಸರ್ಕಾರ ಈ ಬಾರಿಯಾದರೂ ಮಂಜೂರಾದ ಕಾಮಗಾರಿಗಳ ಅನುದಾನದಲ್ಲಿ ಅಂಜನಾದ್ರಿಗೆ ಬೇಕಾದ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮವಹಿಸಬೇಕು. ಜೊತೆಗೆ ರೈತರಿಗೆ ಸೂಕ್ತ ಪರಿಹಾರ ಒದಗಿಸಬೇಕು' ಎಂದು ಒತ್ತಾಯಿಸಿದ್ದಾರೆ.

# ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಬ್ಯಾಲೆಟ್ ಪೇಪರ್ ಬಳಕೆ: ಸೋಲಾಪುರ ಸ್ವಾಗತ



**ವಿಜಯಪುರ :** ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಬ್ಯಾಲೆಟ್ ಪೇಪರ್ ಗಳ ಮೂಲಕ ನಡೆಸುವ ಕರ್ನಾಟಕ ರಾಜ್ಯ ಸರ್ಕಾರದ ಕ್ರಮವನ್ನು ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ಭೋಗೇಶ ಸೋಲಾಪುರ ಸ್ವಾಗತಿಸಿದ್ದಾರೆ.

ಇತ್ತೀಚೆಗೆ ಅನೇಕ ರಾಜ್ಯಗಳಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಮತ ಕಳ್ಳತನ ಆಗಿದೆ ಎಂಬ ಸಾಕ್ಷ್ಯಸಮೇತದ ಇಂಡಿಯಾ ಒಕ್ಕೂಟದ ನಾಯಕರುಗಳ ಗುರುತರ ಆರೋಪಗಳಿಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡದ ಪ್ರಧಾನಿಗಳ ಉದ್ಧಟತನ ಒಂದು ಕಡೆ. ಮತ್ತೊಂದು ಕಡೆ ಆರೋಪಿತ ಸ್ಥಾನದ ಕೇಂದ್ರ ಚುನಾವಣಾ ಆಯೋಗವು ಸೂಕ್ತ ಸ್ಪಷ್ಟೀಕರಣಗಳನ್ನು ಹಾಗೂ ಸಮಜಾಯಿಷಿಗಳನ್ನು ನೀಡದೆ, ಆರೋಪ ಮಾಡಿದ್ದ ನಾಯಕರುಗಳ ವಿರುದ್ಧವೇ ರಾಜಕೀಯ ಪ್ರತಿಕ್ರಿಯೆಗಳನ್ನು ನೀಡಿ ಮುಚ್ಚಿ ಹಾಕುವ ತಂತ್ರಗಾರಿಕೆಯಲ್ಲಿ ತೊಡಗಿತ್ತು ಎಂದು ಪತ್ರಿಕಾ ಪ್ರಕಟಣೆ ಯಲ್ಲಿ ಆರೋಪಿಸಿದ್ದಾರೆ.

ಇವರ ನಡೆಯಿಂದಾಗಿ ಕೇಂದ್ರ ಚುನಾವಣಾ ಆಯೋಗಕ್ಕೆ ಹಾಗೂ ಕೇಂದ್ರ ಸರ್ಕಾರಕ್ಕೆ ಆಮೂಲಾಗ್ರ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವ ಇಚ್ಛೆ ಇಲ್ಲದಿರುವುದು ದೇಶದ ಜನತೆಗೆ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಇಂತಹ ಕಠಿಣ ಸಂದರ್ಭದಲ್ಲಿ ಬ್ಯಾಲೆಟ್ ಪೇಪರ್ ಬಳಕೆಯ ನಿರ್ಧಾರ ಕೈಗೊಂಡಿರುವುದು ಅತ್ಯಂತ ಸ್ವಾಗತರ್ಹ ಕ್ರಮ ಎಂದು ಆಮ್ ಆದ್ಮಿ ಪಕ್ಷ ಸ್ವಾಗತಿಸಿದೆ ಎಂದು ತಿಳಿಸಿದ್ದಾರೆ.

ಕಳೆದ ದೆಹಲಿ ರಾಜ್ಯ ವಿಧಾನಸಭೆಯ ಚುನಾವಣೆಯಲ್ಲಿಯೂ ಸಹ ಆಮ್ ಆದ್ಮಿ ಪಕ್ಷವು ಪ್ರತಿಯೊಂದು ವಿಧಾನಸಭಾ ಕ್ಷೇತ್ರಗಳಲ್ಲಿಯೂ ಸಾವಿರಾರು ಮತದಾರರುಗಳನ್ನು ಕೈ ಬಿಟ್ಟಿದ್ದ ಸಂದರ್ಭದಲ್ಲಿ ಅನೇಕ ಹಂತಗಳಲ್ಲಿ ಹೋರಾಟಗಳನ್ನು ನಡೆಸಿತ್ತು. ಮತ ಪಟ್ಟಿಯಿಂದ ಕೈ ಬಿಟ್ಟಿದ್ದ ಸಾವಿರಾರು ಮತದಾರರುಗಳ ಬೃಹತ್ ರ್ಯಾಲಿಗಳನ್ನು ನಡೆಸಿ ಚುನಾವಣಾ ಆಯೋಗಕ್ಕೆ ದೂರನ್ನು ಸಲ್ಲಿಸಿದ್ದರೂ ಸಹ ಯಾವುದೇ ಕ್ರಮ ತೆಗೆದುಕೊಳ್ಳದ ಕೇಂದ್ರ ಚುನಾವಣಾ ಆಯೋಗವು ಇಂತಹ ಅನೇಕ ಅಕ್ರಮ ಮತದಾನ ಪ್ರಕ್ರಿಯೆಗಳಲ್ಲಿ ಗೊತ್ತಿದ್ದರೂ ಸಹ ಕಣ್ಮುಚ್ಚಿ ಕುಳಿತುಕೊಂಡಿತ್ತು.

ದೇಶದ ಸಾಂವಿಧಾನಿಕ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ರೀತಿಯ ಮತ ಕಳ್ಳತನ ಮಾಡಿ ಅಧಿಕಾರ ಪಡೆದುಕೊಳ್ಳುವ ಪ್ರಬಲ ಹುನ್ನಾರ ತಪ್ಪಬೇಕಾದರೆ ಬ್ಯಾಲೆಟ್ ಪೇಪರ್ ನ ಅವಶ್ಯಕತೆ ಅತ್ಯಂತ ಜರೂರಾಗಿದೆ.

ಪಕ್ಷವು ಎಲ್ಲ ಸ್ತರ ಗಳಲ್ಲಿಯೂ ರಾಜ್ಯ ಸರ್ಕಾರದ ನಿರ್ಧಾರವನ್ನು ಸ್ವಾಗತಿಸುತ್ತದೆ. ಭಾರತೀಯ ಜನತಾ ಪಕ್ಷಕ್ಕೆ ಮತ ಕಳ್ಳತನವನ್ನು ನಿಜಕ್ಕೂ ತಡೆಗಟ್ಟುವ ಮನಸ್ಸಿದ್ದಲ್ಲಿ ಬಿಜೆಪಿ ಅಧಿಕಾರ ಹೊಂದಿರುವ ಇನ್ನಿತರ ರಾಜ್ಯಗಳಲ್ಲಿಯೂ ಸಹ ಇದೇ ರೀತಿಯ ನಿರ್ಧಾರಗಳನ್ನು ತೆಗೆದುಕೊಳ್ಳಬೇಕೆಂದು ಭೋಗೇಶ ಸೋಲಾಪುರ ಸವಾಲನ್ನು ಹಾಕಿದ್ದಾರೆ.

# ಎಂ.ಬಿ.ಬಿ.ಎಸ್ ಕೋರ್ಸಿಗೆ 50 ಹೆಚ್ಚುವರಿ ಸೀಟುಗಳು ಮಂಜೂರು

**ವಿಜಯಪುರ :** ನಗರದ ಪ್ರತಿಷ್ಠಿತ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರಕ್ಕೆ 2025–26ನೇ ಶೈಕ್ಷಣಿಕ ವರ್ಷದಲ್ಲಿ ಎಂ.ಬಿ.ಬಿ.ಎಸ್ ಕೋರ್ಸಿಗೆ 50 ಹೆಚ್ಚುವರಿ ಸೀಟುಗಳು ಮಂಜೂರಾಗಿವೆ. ಇದರಿಂದಾಗಿ ಬಿ.ಎಲ್.ಡಿ.ಇ ವೈದ್ಯಕೀಯ ಕಾಲೇಜಿನಲ್ಲಿ ಈ ಬಾರಿ ಒಟ್ಟು 250 ವಿದ್ಯಾರ್ಥಿಗಳಿಗೆ ಎಂ.ಬಿ.ಬಿ.ಎಸ್ ಪ್ರಥಮ ವರ್ಷಕ್ಕೆ ಪ್ರವೇಶ ಸಿಗಲಿದೆ.

ಕಾಲೇಜು ಈ ವರ್ಷದ ಜನೇವರಿಯಲ್ಲಿ ಹೆಚ್ಚುವರಿ ಸೀಟು ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿತ್ತು. ಅದರಂತೆ ಜೂನ್ 2025ರಲ್ಲಿ ನ್ಯಾಶನಲ್ ಮೆಡಿಕಲ್ ಕಮಿಷನ್(ಓಚಿಣುಠಟಿಚಿಟ ಒಜಜುಛಿಚಿಟ ಅಠಟಟಞುಠಟಿ) ಅಧಿಕಾರಿಗಳು ಕಾಲೇಜು ಮತ್ತು ಆಸ್ಪತ್ರೆಗೆ ಆಗಮಿಸಿ ಇಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳು, ವೈದ್ಯಕೀಯ ಸಲಕರಣೆಗಳು, ಅರ್ಹ ತಜ್ಞವೈದ್ಯರು, ನರ್ಸಿಂಗ್ ಸಿಬ್ಬಂದಿ, ರೋಗಿಗಳ ದಾಖಲಾತಿ ಹಾಗೂ ಇನ್ನಿತರ ಸೌಲಭ್ಯಗಳ ಕುರಿತು ಮೌಲ್ಯಮಾಪನ ನಡೆಸಿ ವರದಿ ಸಲ್ಲಿಸಿದ್ದರು. ಈ ವರದಿಯನ್ನು ಪರಿಗಣಿಸಿ ದೆಹಲಿಯ ನ್ಯಾಶನಲ್ ಮೆಡಿಕಲ್ ಕಮಿಷನ್ ಹೆಚ್ಚುವರಿಯಾಗಿ 50 ಎಂ.ಬಿ.ಬಿ.ಎಸ್ ಸೀಟುಗಳನ್ನು ಮಂಜೂರು ಮಾಡಿದೆ. ಇದರಿಂದಾಗಿಬಿ.ಎಲ್.ಡಿ.ಇಡೀಮ್ಡ್‌ವಿವಿಯ ಶ್ರೀ ಬಿ. ಎಂ. ಪಾಟೀಲ ಮೆಡಿಕಲ್ ಕಾಲೇಜು ಹೆಚ್ಚುವರಿ ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮತ್ತು ಪ್ರಾಯೋಗಿತ ತರಬೇತಿ ಮತ್ತು ಹೊಸದಾಗಿ ವೈದ್ಯರನ್ನಾಗಿ ತಯಾರು ಮಾಡಿ ಉತ್ತರ ಕರ್ನಾಟಕದ ರೋಗಿಗಳಿಗೆ ಹೆಚ್ಚಿನ ಆರೋಗ್ಯ

ಸೇವೆ ಒದಗಿಸಲು ಅನುಕೂಲವಾಗಿದೆ.

ಅಷ್ಟೇ ಅಲ್ಲ, ಈಗಾಗಲೇ ಎಂಡಿ, ಎಂ.ಎಸ್., ಎಂ.ಸಿ.ಎಚ್, ಡಿಎಂ ಸೇರಿದಂತೆ 24ಕ್ಕೂ ಹೆಚ್ಚು ನಾನಾ ಸ್ನಾತಕೋತ್ತರ ವಿಭಾಗಗಳಲ್ಲಿ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅದ್ಯಯನ ಮಾಡುತ್ತಿದ್ದಾರೆ.

ನ್ಯಾಶನಲ್ ಮೆಡಿಕಲ್ ಕಮಿಷನ್ ಹೊಸದಾಗಿ 50 ಸೀಟುಗಳನ್ನು ಮಂಜೂರು ಮಾಡಿರುವುದಕ್ಕೆ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷ ಎಂ. ಬಿ. ಪಾಟೀಲ,

ಕುಲಾಧಿಪತಿ ಬಸನಗೌಡ ಎಂ. ಪಾಟೀಲ, ಸಮಕುಲಾಧಿಪತಿಡಾ.ವೈ.ಎಂ.ಜಯರಾಜ, ಹಂಗಾಮಿ ಕುಲಪತಿ ಡಾ. ಅರುಣ ಚಂ. ಇನಾಮದಾರ, ಸಂತಸ ವ್ಯಕ್ತಪಡಿಸಿದ್ದು,

ಈ ಸೀಟುಗಳು ಮಂಜೂರಾಗಲು ಶ್ರಮಿಸಿದ ಕಾಲೇಜಿನ ಕಾಲೇಜಿನ ನಿಕಟಪೂರ್ವ ಪ್ರಾಚಾರ್ಯ ಡಾ. ಅರವಿಂದ ಪಾಟೀಲ, ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹೊನ್ನುಟಗಿ,

ವಿವಿಯ ಅಧಿಕಾರಿಗಳು, ಆಸ್ಪತ್ರೆಯ ವೈದ್ಯರು, ಕಾಲೇಜಿನ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಅಭಿನಂದನೆ.




# ಉದ್ಯೋಗದಲ್ಲಿ ಆತ್ಮೀಯ ಭಾವನೆ ಇರಲಿ:ಜೋಶಿ



**ತಾಳಿಕೋಟೆ :** ಯಾವದೇ ವ್ಯಾಪಾರವಾಗಲಿ ಉದ್ಯೋಗವನ್ನಾಗಲಿ ಸೃಷ್ಟಿಸಿಕೊಂಡು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಬೇಕಾದರೆ ಎಲ್ಲ ಜನರೊಂದಿಗೆ ಸಹಕಾರ ಮನೋಭಾವನೆಯೆಂಬುದನ್ನು ತೋರುವುದು ಅಗತ್ಯವಾಗಿದೆ ಇದರಿಂದ ಸಂಭಂದಿಸಿ ಪ್ರಾರಂಭಿಸಲಾದ ಉದೋಗ ವ್ಯವಸಾಯಕ್ಕೆ ಅನುಕೂಲವಾಗಲಿದೆ ಎಂದು ಸ್ಥಳೀಯ ಶ್ರೀ ಶಿವಭವಾನಿ ಮಂದಿರದ ಅರ್ಚಕರಾದ ವೇ|| ಸಂತೋಷ ಭಟ್ ಜೋಷಿ ಅವರು ನುಡಿದರು.

ಶುಕ್ರವಾರರಂದು ಮಾರ್ಕೆಟ್ ಯಾರ್ಡ್‌ನಲ್ಲಿಯ ವಿಠ್ಠಲಸಿಂಗ್ ಹಜೇರಿ ಅವರ ಮೇಲ್ಛಾವಣಿಯಲ್ಲಿ ಪ್ರಾರಂಭಿಸಲಾದ ಲೆಕ್ಕ ಪರಿಶೋಧಕರ ಕಛೇರಿ ಉದ್ಘಾಟನಾ ಕಾರ್ಯಕ್ರಮವನ್ನು ಶ್ರೀ ಮಹಾಲಕ್ಷ್ಮೀ, ಮಹಾಸರಸ್ವತಿಯ ಮಹಾಪೂಜೆಯನ್ನು ಪ್ರಾರಂಭಿಸಿ ಮಾತನಾಡುತ್ತಿದ್ದ ಅವರು ಈ ಒಂದು ಕಛೇರಿಯ ಸಂಭಂದಿಸಿದ ಚಾರ್ಟೆಡ್ ಅಕೌಟೆಂಟ್‌ರಾದ ಜ್ಯೋತಿಬಾ ಕೋಡಗೆ ಅವರು ಈ ಕಾರ್ಯದಲ್ಲಿ ನುರಿತವರಾಗಿದ್ದಾರೆ ಅವರು ಮಾಡಿದಂತಹ ಈ ಕಾರ್ಯ ಗುಣಗಾನದಾಯಕವಾಗಿದೆ ಈ ಸೇವೆ ಈಭಾಗದ ವ್ಯಾಪಾರಸ್ಥರಿಗೆ ಹಾಗೂ ಉದ್ಯೋಗಸ್ಥರಿಗೆ ಎಲ್ಲರಿಗೂ ಲಭ್ಯವಾಗಲಿ ಎಂದರು.

ಇನ್ನೋರ್ವ ಚಾರ್ಟೆಡ್ ಅಕೌಂಟೆಂಟರಾದ ಜ್ಯೋತಿಬಾ ಕೋಡಗೆ ಅವರು ಲೆಕ್ಕ ಪರಿಶೋಧಕರ ಕಛೇರಿ ಪ್ರಾರಂಭಿಸಿದ್ದರ ಕುರಿತು ಹಾಗೂ ಈ ಕಚೇರಿಯಿಂದ ಕಾರ್ಯ ನಿರ್ವಹಿಸುವಂತಹ ಇನ್‌ಕಮ್‌ಟ್ಯಾಕ್ಸ್, ಜಿಎಸ್‌ಟಿ, ಬ್ಯಾಂಕಿಂಗ್ ಇನ್‌ವೆಸ್ಟಮೆಂಟ್ ಮತ್ತು ಮ್ಯಾನೇಜಿಂಗ್ ಕನ್ಸಂಟ್ಸ್ ಸೇವಾ ಕಾರ್ಯ ಕುರಿತು ವಿವರಿಸಿದರು.

ಈ ಸಮಯದಲ್ಲಿ ನಿವೃತ್ತ ಕಮೀಷನರ್ ಬಿ.ಎ. ಶಿಂದೆ, ಬಾಬು ಹಜೇರಿ, ಎಂ.ಎಸ್. ಸರಸೆಟ್ಟಿ, ಸಂಬಾಜಿ ವಾಡಕರ, ನಾರಾಯಣ ಸುಬೇದಾರ, ಶಶಿಧರ ಡಿಸಲೆ, ಬಬಲೇಶ್ವರ, ವ್ಹಿ.ಸಿ. ಹಿರೇಮಠ(ಹಂಪಿಮುತ್ಯಾ) ಅವರನ್ನೊಳಗೊಂಡು ಮೊದಲಾದವರು ಉಪಸ್ತಿತರಿದ್ದು ಶುಭ ಹಾರೈಸಿದರು.

# ಪಿಪಿಪಿ ಮಾದರಿ ಮೆಡಿಕಲ್ ಕಾಲೇಜ್ ಕೈ ಬಿಡಲು ಒತ್ತಾಯ ಮುಖ್ಯಮಂತ್ರಿ ಬಳಿ ನಿಯೋಗ ಹೋಗಲು ನಿರ್ಧಾರ




**ವಿಜಯಪುರ :** ವಿಜಯಪುರದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ವೈದ್ಯಕೀಯ ಕಾಲೇಜ್ ಸ್ಥಾಪನೆ ಕೈ ಬಿಟ್ಟು ಪೂರ್ಣವಾಗಿ ಸರ್ಕಾರಿ ವೈದ್ಯಕೀಯ ಕಾಲೇಜ್ ಸ್ಥಾಪನೆಯ ಕೂಗು ದಿನದಿಂದ ದಿನಕ್ಕೆ ಬಲಗೊಳ್ಳುತ್ತಿದ್ದು, ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗಾಗಿ ವಿವಿಧ ಸಂಘಟನೆ, ರೈತ ಸಂಘಟನೆಗಳು ಸೇರಿದಂತೆ ಒಂದೇ ವೇದಿಕೆಯಡಿಯಲ್ಲಿ ಹೋರಾಟ ನಡೆಸಲು 'ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಹೋರಾಟ ಸಮಿತಿ' ಅಸ್ತಿತ್ವಕ್ಕೆ ಬಂದಿದ್ದು, ಈ ಸಮಿತಿ ನೇತೃತ್ವದಲ್ಲಿ ವಿಜಯಪುರ ಜಿಲ್ಲೆಗೆ ನಾಳೆ ಭೇಟಿ ನೀಡಲಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಈ ಸಮಿತಿ ನಿಯೋಗ ಭೇಟಿ ಮಾಡಿ ಈ ಪಿಪಿಪಿ ಪ್ರಕ್ರಿಯೆ ಕೈ ಬಿಟ್ಟು ಸಂಪೂರ್ಣ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಹಕ್ಕೊತ್ತಾಯ ಮಂಡಿಸಲಿದೆ.

ಅದೇ ತೆರನಾಗಿ ಸಮಿತಿ ಸೆ.9 ರಂದು ಬೃಹತ್ ಪ್ರತಿಭಟನೆಗೆ ಕರೆ ನೀಡಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡ ವಿವಿಧ ಸಂಘಟನೆಯ ಸದಸ್ಯರು ಮುಖ್ಯಮಂತ್ರಿಗಳನ್ನು ನಿಯೋಗದೊಂದಿಗೆ ಭೇಟಿ ಮಾಡಿ ಈ ವಿಷಯದ ಕುರಿತು ಮನವರಿಕೆ ಮಾಡಿಕೊಡಲಾಗುವುದು ಎಂದರು.

ದಿ.9 ರಂದು ನಗರದ ಶ್ರೀ ಸಿದ್ದೇಶ್ವರ ದೇವಾಲಯದಿಂದ ಡಾ.ಅಂಬೇಡ್ಕರ ವೃತ್ತದವರೆಗೂ ಬೃಹತ್ ರ್‍ಯಾಲಿ ನಡೆಸಿ ಸರ್ಕಾರಕ್ಕೆ ಮತ್ತೊಮ್ಮೆ ಹಕ್ಕೊತ್ತಾಯ ಮಂಡಿಸಲು ಸಹ ನಿರ್ಧರಿಸಲಾಗಿದೆ ಎಂದು ಪ್ರಕಟಿಸಿದರು.

ಹಿರಿಯ ಪತ್ರಕರ್ತ, ಹೋರಾಟಗಾರ ಅನಿಲ ಹೊಸಮನಿ ಮಾತನಾಡಿ, ವಿಜಯಪುರ ಜಿಲ್ಲೆಯ ಜನತೆ ಬರ, ಅತಿವೃಷ್ಟಿ ಹೀಗೆ ನಾನಾ ರೀತಿಯ ತೊಂದರೆ ಎದುರಿಸುತ್ತಲೇ ಇದ್ದಾರೆ.

ದುಬಾರಿ ದುನಿಯಾದಲ್ಲಿ ಚಿಕಿತ್ಸೆಗಾಗಿ ಹಣ ಹೊಂದಿಸಲು ಸಾಲ ಮಾಡುವ ಪರಿಸ್ಥಿತಿ ಇದೆ.

ಈ ಸಂದರ್ಭದಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜ್ ಸ್ಥಾಪಿಸಿ ಬಡಜನರಿಗೆ ಉತ್ತಮ ಆರೋಗ್ಯ ಸೌಲಭ್ಯ ಹಾಗೂ ಬಡ ವಿದ್ಯಾರ್ಥಿಗಳಿಗೆ ವೈದ್ಯರಾಗುವ ಕನಸು ನನಸು ಮಾಡುವಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜ್ ಸ್ಥಾಪನೆ ದಶಕಗಳ ಕೂಗು. ಆದರೆ ಖಾಸಗಿ ಸಹಭಾಗಿತ್ವದಲ್ಲಿ ಮೆಡಿಕಲ್ ಕಾಲೇಜ್ ಮಾಡಿದರೆ ವಿದ್ಯಾರ್ಥಿ, ಬಡ ರೋಗಿಗಳಿಗೂ ದೊಡ್ಡಮಟ್ಟದ ಅಪಾಯ ಎಂದು ಆತಂಕ ವ್ಯಕ್ತಪಡಿಸಿದರು.

ಹೋರಾಟಗಾರ ಭಿ. ಭಗವಾನರೆಡ್ಡಿ ಮಾತನಾಡಿ, ವಿಜಯಪುರ ಜಿಲ್ಲಾ ಆಸ್ಪತ್ರೆಯಲ್ಲಿ ಈಗಾಗಲೇ ಹಲವಾರು ಸೌಲಭ್ಯಗಳಿವೆ.

ಪೂರಕವಾಗಿ 149.12 ಎಕರೆ ಜಾಗ, 1500 ಕ್ಕೂ ಹೆಚ್ಚು ಒಳ ರೋಗಿಗಳ ದಾಖಲಾತಿ, ಸಿ.ಟಿ–ಎಂಆರ್‌ಐ, ಸುಸಜ್ಜಿತ ತಾಯಿ–ಮಕ್ಕಳ ಆಸ್ಪತ್ರೆ, ಶಸ್ತ್ರ ಚಿಕಿತ್ಸೆ ಹೀಗೆ ಮೆಡಿಕಲ್ ಕಾಲೇಜ್‌ಗೆ ಬೇಕಿರುವ ಎಲ್ಲ ಸೌಲಭ್ಯಗಳು ಈಗಾಗಲೇ ರೆಡಿಮೇಡ್ ರೂಪದಲ್ಲಿವೆ.

ಹೀಗಿದ್ದರೂ ಖಾಸಗಿಯವರ ಸುಪರ್ದಿಯಲ್ಲಿ ಮೆಡಿಕಲ್ ಕಾಲೇಜ್ ಆದರೆ ಅದು ಶೋಷಣೆಗೂ ದಾರಿಯಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಬಜೆಟ್ ಕೊರತೆ ಎಂಬ ನೆಪದಿಂದ ಬಡವರ ಮೇಲೆ ಶೋಷಣೆ ಮಾಡುವ ಯೋಜನೆ ಹೇರಿಕೆ ಬೇಡ ಎಂದು ಒತ್ತಾಯಿಸಿದರು.

ದಿ.9 ರಂದು ಬೃಹತ್ ಹೋರಾಟ ನಡೆಯಲಿದ್ದು, ಪ್ರತಿಯೊಬ್ಬರು ಈ ಹೋರಾಟಕ್ಕೆ ಕೈ ಜೋಡಿಸಬೇಕು ಎಂದು ಸಮಿತಿ ಪದಾಧಿಕಾರಿಗಳು ಒಕ್ಕೊರಲಿನಿಂದ ಒತ್ತಾಯಿಸಿದರು.

ಸಮಿತಿಯ ನಾಯಕರಾದ ಶ್ರೀನಾಥ ಪೂಜಾರಿ, ಅಣ್ಣಾರಾಯ ಈಳಗೇರ, ಅಕ್ರಂ ಮಾಶ್ಯಾಳಕರ, ಮಲ್ಲಿಕಾರ್ಜುನ ಬಟಗಿ, ಅರವಿಂದ ಕುಲಕರ್ಣಿ ಸೇರಿದಂತೆ ಅನೇಕ ಸಂಘಟನೆಯ ಮುಖಂಡರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ರಮಾಬಾಯಿ ಪ್ರೌಢಶಾಲೆಯಲ್ಲಿ ಶಿಕ್ಷಕ ದಿನಾಚರಣೆ



**ವಿಜಯಪುರ :** ಇಲ್ಲಿನ ಮಾತೋಶ್ರೀ ರಮಾಬಾಯಿ ಅಂಬೇಡ್ಕರ್ ಪ್ರೌಢಶಾಲೆ, ಸಿದ್ಧಾರ್ಥ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪಿಯು ಕಾಲೇಜು ಮತ್ತು ಡಿಗ್ರಿ ಕಾಲೇಜಿನಲ್ಲಿ ಶುಕ್ರವಾರ ಸರ್ವಪಲ್ಲಿ ರಾಧಾಕೃಷ್ಣನ್ ಹಾಗೂ ಸಾವಿತ್ರಿಬಾಯಿ ಜ್ಯೋತಿಬಾಫುಲೆ ಶಿಕ್ಷಕ ದಿನವನ್ನು ಆಚರಿಸಲಾಯಿತು.

ಸಂಸ್ಥೆಯ ಸಂಸ್ಥಾಪಕ ತುಕಾರಾಂ ಚಂಚಲಕರ ಅವರು ಸರ್ವಪಲ್ಲಿ ರಾಧಾಕೃಷ್ಣನ್ ಹಾಗೂ ಸಾವಿತ್ರಿಬಾಯಿ ಫುಲೆ ಅವರ ಭಾವಚಿತ್ರಗಳಿಗೆ ಮಾಲಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಚಂಚಲಕರ ಅವರು ಮಾತನಾಡಿ, ಆಗಿನ ಕಾಲಘಟ್ಟದಲ್ಲಿ ಶಿಕ್ಷಣದ ಕೊರತೆ ಇದ್ದುದರಿಂದ ಬಹಳ ಪ್ರಯತ್ನಪಟ್ಟು ಮಾತೆ ಸಾವಿತ್ರಿಬಾಯಿ ಅವರು ಎಲ್ಲಾ ಮಕ್ಕಳನ್ನು ತನ್ನ ಮಕ್ಕಳಂತೆ ಭಾವಿಸಿ ರಾತ್ರಿ ಶಾಲೆ, ವಸತಿ ಶಾಲೆಗಳನ್ನು ತೆರೆದು ಜ್ಯೋತಿಬಾ ಫುಲೆ ಅವರ ಜೊತೆಗೂಡಿ ಹಸಿದ ಮಕ್ಕಳಿಗೆ ಅನ್ನದ ಜೊತೆಗೆ ಅಕ್ಷರವನ್ನು ಕಲಿಸಿದ ಮಹಾಮಾತೆಯಾಗಿದ್ದರು ಎಂದರು. ಶಾಲೆಗೆ ಹೊರಟಾಗ ಮೇಲ್ವರ್ಗದ ಜನ ಶಾಲೆ ಕಲಿಸಲು ತಡೆಹಿಡಿಯುತ್ತಿದ್ದರು. ಆದರೂ ಸಹಿತ ದಿಟ್ಟ ನಿರ್ಧಾರ ತೆಗೆದುಕೊಂಡು ನಿರ್ಗತಿಕ ಬಡ ಮಕ್ಕಳಿಗೆ ನಿಮ್ನವರ್ಗದ ಹಾಗೂ ಅನಾಥ ಮಕ್ಕಳಿಗೆ ತಾಯಿ ತಂದೆಯಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು ಎಂದರು.

ಅದೇ ರೀತಿ ಭಾರತ ರತ್ನ ಸರ್ವಪಲ್ಲಿ ರಾಧಾಕೃಷ್ಣನ್ ಅವರು ತಮ್ಮ ಜನ್ಮದಿನವನ್ನು ಶಿಕ್ಷಕರ ದಿನಾಚರಣೆಯನ್ನು ಆಚರಿಸಿರಿ ಎಂದು ತಮ್ಮ ಜೀವನದುದ್ದಕ್ಕೂ ವಿದ್ಯಾರ್ಥಿಗಳಿಗೆ ಸಿಹಿಯನ್ನೇ ಬಡಿಸಿದರು. ದೇಶ ಕಂಡ ರಾಷ್ಟ್ರಪತಿಗಳಾಗಿ ಇಡೀ ಭಾರತಕ್ಕೆ ಅಷ್ಟೇ ಅಲ್ಲ ಪ್ರಪಂಚಕ್ಕೆ ಭಾರತ ಏನು ಎಂಬುದನ್ನು ತಿಳಿಸಿದ್ದರು ಎಂದು ಹೇಳಿದರು.

ವೇದಿಕೆಯಲ್ಲಿ ಮುಖ್ಯ ಗುರುಗಳಾದ ಎಸ್. ಎಸ್. ಗುಡ್ಲನವರ, ಎಸ್.ಆರ್. ಪು ಲಾರಿ, ರಾಮು ಯಾರವಳ್ಳಿ, ಚಂದ್ರಶೇಖರ ಈ.ಟಿ., ಎಸ್.ಆರ್. ಬಸರಗಿ, ಮುಖ್ಯ ಗುರುಮಾತೆ ವೀಣಾ ಶಿರಗುಪ್ಪಿ ಉಪಸ್ಥಿತರಿದ್ದರು. ಸಚಿನ ನಾಯಕ ಸ್ವಾಗತಿಸಿ, ವಂದಿಸಿದರು.

## ಪ್ರತಿ ಟನ್ ಕಬ್ಬಿಗೆ ರೂ 4 ಸಾವಿರ ನೀಡಲು ಸರಕಾರಕ್ಕೆ ಅಗ್ರಹ



**ಇಂಡಿ :** ತಾಲೂಕಿನಲ್ಲಿ ಕಬ್ಬು ಬೆಳೆಗಾರರು ಸಂಕಷ್ಟಕ್ಕೆ ಸಿಲುಕ್ಕಿದ್ದು ಸರಕಾರಗಳು ಕಬ್ಬು ಬೆಳೆಗಾರರ ಬೆಂಬಲಕ್ಕೆ ನಿಲ್ಲಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಹಸಿರು ಸೇನೆ ಜಿಲ್ಲಾಧ್ಯಕ್ಷ ಎಸ್.ಬಿ.ಕೆಂಬೋಗಿ ಸರಕಾರಕ್ಕೆ ಅಗ್ರಹಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ತಾಲೂಕಿನಲ್ಲಿ 45 ಸಾವಿರ ಹೇಕ್ಟರ್ ಪ್ರದೇಶದಲ್ಲಿ ಕಬ್ಬು ಬೆಳೆ ಬೆಳೆಯಲಾಗುತ್ತಿದ್ದು ಉತ್ಪಾದನಾ ವೆಚ್ಚ ಏರಿಕೆಯಿಂದ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಪ್ರಸ್ತುತ ಕಬ್ಬಿಗೆ ನೀಡಲಾಗುತ್ತಿರುವ 2700 ರೂ ಪ್ರತಿ ಟನ್ ದರವು ರೈತರ ಪರಿಶ್ರಮಕ್ಕೆ ನ್ಯಾಯ ಸಿಗುತ್ತಿಲ್ಲ. ಜತೆಗೆ ಡಿಸೇಲ್, ಗೊಬ್ಬರ, ಬೀಜ, ಮತ್ತು ಕಾರ್ಮಿಕರ ದರ ಗಗನಕ್ಕೆ ಏರಿರುವದರಿಂದ ಒಂದು ಟನ್ ಕಬ್ಬಿನ ಉತ್ಪಾದನಾ ವೆಚ್ಚ ಕನಿಷ್ಠ 4000 ರೂ ಆಗಿದೆ. ಆದರೆ ಸರಕಾರವು ಬೆಲೆ ನಿಗದಿಯಲ್ಲಿ ರೈತರ ಹಿತಾಶಕ್ತಿ ಕಡೆಗಣೆಸುತ್ತಿದೆ ಎಂದು ಅಸಮಾಧಾನ ವ್ಯಕ್ತ ಪಡಿಸಿದರು.

ಇಂದಿನ ಪರಿಸ್ಥಿತಿಯಲ್ಲಿ ರೂ 2700 ದರವು ರೈತರ ಬದುಕು ಸಾಗಿಸಲು ಸಾಕಾಗುವದಿಲ್ಲ. ಕೃಷಿ ಉಳಿಯಬೇಕಾದರೆ ಪ್ರತಿ ಟನ್ ಕಬ್ಬಿಗೆ ರೂ 4000 ರೂ ದರ ನಿಗದಿ ಮಾಡಬೇಕು. ಡಾ. ಸ್ವಾಮಿನಾಥನ್ ವರದಿ ಜಾರಿಗೆ ತರಬೇಕು.ಶೇ 100 ರಷ್ಟು ನಷ್ಟ ಅನುಭವಿಸಿದ ಕಬ್ಬು ಬೆಳೆಗಾರರಿಗೆ ಪರಿಹಾರ ನೀಡಬೇಕು. ಬಾಕಿ ಉಳಿದ ಬೆಳೆಸಾಲ ಮನ್ನಾ ಹಾಗೂ ಶೇ 25 ರಷ್ಟು ಉತ್ಪಾದನಾ ವೆಚ್ಚ ಸಹಾಯಧನ ನೀಡಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ತಮ್ಮಾರಾಯ ಆಸಂಗಿ, ಮಲ್ಲಿಕಾರ್ಜುನ ಹೋರ್ತಿ, ಸುರೇಶ ಬಿರಾದಾರ, ಮಲ್ಲಿಕಾರ್ಜುನ ನಾವದಗಿ, ಶರಣು ಬಿಸನಾಳ ಮತ್ತಿತರಿದ್ದರು.

# ಮಕ್ಕಳಿಗೆ ಶಿಕ್ಷಣ ನೀಡಿ ಸಮಾಜ ಮುಂದೆಬರಲು ಶಿಕ್ಷಣವೇ ದೊಡ್ಡ ಅಸ್ತ್ರ:ಮಾಜಿ ಶಾಸಕ ಆನಂದ ನ್ಯಾಮಗೌಡ



**ಜಮಖಂಡಿ :** ಮಹಮ್ಮದ ಪೈಗಂಬರರು ಮಹಿಳೆಯರಿಗೆ ಸಮಾನವಾದ ಹಕ್ಕು ಶಿಕ್ಷಣ ನೀಡಲು ಹೋರಾಟ ಮಾಡಿದ್ದರು. ಮಕ್ಕಳಿಗೆ ಶಿಕ್ಷಣ ನೀಡಿ ಸಮಾಜ ಮುಂದೆಬರಲು ಶಿಕ್ಷಣವೇ ದೊಡ್ಡ ಅಸ್ತ್ರವಾಗಿದೆ ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ಹೇಳಿದರು.

ನಗರದ ಮುಧೋಳ ರಸ್ತೆಯ ಶಾಹಾ ಆಲಂ ಗೇಟ ಹತ್ತಿರ ಹಜರತ ಮೊಹಮ್ಮದ ಪ್ರವಾದಿ ಪೈಗಂಬರರ 1500 ನೇ ಜಯಂತಿ ನಿಮಿತ್ಯ ಬೃಹತ ಶೋಭಾಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು ದೇವರು ಒಬ್ಬನೇ ಆದರೆ ನಾಮ ಹಲವು ಆಚರಣೆ ಹಲವಿದೆ ಆದರೆ ಪ್ರಾರ್ಥನೆ ಮಾತ್ರ ಒಂದೇ ಆಗಿದೆ. ಶರಣರ ವಚನಗಳು ಕೂಡಾ ಇದನ್ನೇ ಹೇಳಿದೆ ಎಂದರು.

ಸ್ಥಳೀಯವಾಗಿ ಗಣೇಶ ಉತ್ಸವವು ಇಲ್ಲಿ ಎಲ್ಲ ಸಮುದಾಯದವರು ಸೇರಿ ಉತ್ಸವ ಆಚರಿಸುತ್ತಿದ್ದಾರೆ, ಈ ಜಯಂತಿಯೂ ಕೂಡಾ ಕೇವಲ ಮುಸಲ್ಮಾನರಿಗೆ ಸೀಮಿತವಾಗಿರದೇ ಎಲ್ಲರೂ ಆಚರಿಸಬೇಕು ಅವರ ತತ್ವ ಅರಿಯಬೇಕು ಅವರ ದಾರಿಯಲ್ಲಿ ಜೀವನ ಸಾಗಿಸಬೇಕು ಎಂದು ಹೇಳಿದರು.

ಮುತ್ತಿನಕಂತಿ ಮಠದ ಶಿವಲಿಂಗ ಪಂಡಿತಾರಾಧ್ಯ ಶ್ರೀಗಳು ಆಶೀರ್ವಚನ ನೀಡುತ್ತ ಮೊಹಮ್ಮದ ಪೈಗಂಬರರು ಜಗತ್ತಿಗೆ ಶಾಂತಿಯನ್ನು ತೋರಿದವರು ಜಗತ್ತಿನಲ್ಲಿ ಮಾನವ ಜನ್ಮವೇ ದೊಡ್ಡದು ಅದನ್ನು ಸದುಪಯೋಗಪಡಿಸಿಕೊಳ್ಳಬೇಕು. ಭಾರತ ದೇಶವು ಅನೇಕ ಧರ್ಮದ ಜನರ ನಾಡಾಗಿದೆ.

ಎಲ್ಲರಿಗೂ ಅವರವರ ಜನ್ಮ ದೊಡ್ಡದೇ ಆಗಿರುತ್ತದೆ ಅವರ ಆಚಾರ ವಿಚಾರ ಅರಿತು ನಡೆಯಬೇಕು.ಯಾವುದೆ ಜನ್ಮದಲ್ಲಿ ಹುಟ್ಟಿದರೂ ಮೊದಲು ಮನುಷ್ಯನಾಗಿ ಹುಟ್ಟಬೇಕು ಮಾನವನಾಗಿ ಜೀವಿಸಬೇಕು ಮಾನವೀಯತೆಯನ್ನು ಮೆರೆಯಬೇಕು ಎಂದ ಹೇಳಿದರು.

ನಗರಸಭೆ ಅದ್ಯಕ್ಷ ಈಶ್ವರ ವಾಳೆನ್ನವರ, ಮೌಲಾನಾ ಅಬುಸಾಲಿಯಾಸಾ, ಮಲಾನಾ ಖುತ್ಬುದಿನ್ನ ಬಿಜಾಪುರ, ಮೌಲಾನಾ ಶಿಸರ್ಂಗಿ, ಮಾಮೂನರಸೀಧ ಪಾರಥನಳ್ಳಿ, ತೌಫಿಕ್ ಪಾರಥನಳ್ಳಿ, ರಿಯಾಜ ಅವಟಿ, ನಜೀರ ಕಂಗನೊಳ್ಳಿ, ನಗರಸಭೆ ಸದಸ್ಯ ಮುಬಾರಕ ಅಪರಾಧ್, ಮೌಲಾನಾ ಜುನೆದ ರಜಾ, ನಗರ ಯೋಜನೆ ಪ್ರಾಧಿಕಾರ ಅದ್ಯಕ್ಷ ಅನ್ವರ ಮೋಮಿನ, ರಫಿಕ್ ಬಾರಿಗಡ್ಡಿ, ಸುಶಿಲಕುಮಾರ ಬೆಳಗಲಿ, ನ್ಯಾಯವಾದಿ ಶಶಿಕಾಂತ ದೋಡಮನಿ, ಡಿ.ವಾಯ್. ಎಸ್.ಪಿ ಸಯ್ಯದ ರೋಷನ್ ಜಮೀರ, ಸಿಪಿಐ ಮಲ್ಲಪ್ಪ ಮಡ್ಡಿ, ಪಿ.ಎಸ್.ಐ ಅನೀಲ ಕುಂಬಾರ, ಅಬುಬಕ್ಕರ ಕುಡಚಿ, ಸಾಧೀಕ್ ಬಂಟನೂರ, ಮುಸ್ತಾಕ್ ಝಂಡೆ ಇನ್ನಿತರರಿದ್ದರು.

## ದೇವರ ಸ್ವರೂಪದಲ್ಲಿ ಶಿಕ್ಷಕರನ್ನು ಪೂಜಿಸುವ ದೇಶ ಭಾರತ: ಆನಂದ ದೇವರು

**ವಿಜಯಪುರ :** ದೇವರ ಸ್ವರೂಪದಲ್ಲಿ ಶಿಕ್ಷಕರನ್ನು ಪೂಜಿಸುವ ದೇಶ ನಮ್ಮ ಭಾರತ ದೇಶವಾಗಿದೆ ಎಂದು ಜಮಖಂಡಿಯ ಓಲೆಮಠದ ಆನಂದ ದೇವರು ಸ್ವಾಮೀಜಿ ಹೇಳಿದರು.

ನಗರದ ತೊರವಿ ರಸ್ತೆಯಲ್ಲಿರುವ ಜಿ.ಕೆ. ಪಾಟೀಲ ಸಮುದಾಯ ಭವನದಲ್ಲಿ ಜಿಲ್ಲಾ ಪಂಚಾಯತಿ, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಗ್ರಾಮೀಣ ವಲಯದ ವತಿಯಿಂದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆಯ ಅಂಗವಾಗಿ ಶುಕ್ರವಾರ ಏರ್ಪಡಿಸಿದ ಶಿಕ್ಷಕರ ದಿನೋತ್ಸವ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಒಬ್ಬ ಅಶಕ್ತನನ್ನು ಸಶಕ್ತನನ್ನಾಗಿ ಮಾಡುವ ಶಕ್ತಿ ಗುರುವಿಗಿದೆ. ಶಿಕ್ಷಕ, ರೈತ, ಸೈನಿಕ ಈ ಮೂವರು ದೇಶಕ್ಕೆ ಅಮೂಲ್ಯವಾದ ರತ್ನಗಳಾಗಿವೆ. ಯಾವ ಸ್ವಾರ್ಥವನ್ನು ಬಯಸದೇ ಅಕ್ಷರ ಕಲಿಸುವ ಮನೋಭಾವ ಉಳ್ಳವರಾಗಿದ್ದಾರೆ. ಗುರಿ ಮುಟ್ಟಬೇಕಾದರೆ ಗುರು ಬೇಕು. ಮಕ್ಕಳಲ್ಲಿ ಒಳ್ಳೆಯ ಶಿಕ್ಷಣ ಕೊಡಬೇಕು. ಶಿಕ್ಷಕ ಒಬ್ಬ ಇರದಿದ್ದರೆ ಏನು ಆಗಲ್ಲ. ಎಲ್ಲ ಸಾಧಕರಿಗೂ ಒಬ್ಬ ಗುರು ಇದ್ದೇ ಇರತ್ತಾನೆ. ಅಂತರಾಳದ ಜ್ಞಾನ ಪಡೆದುಕೊಳ್ಳಬೇಕು. ಆ ಜ್ಞಾನ ಮಾತ್ರ ನಿನ್ನ ಸಂಪತ್ತು. ಜ್ಞಾನ ಇದ್ದರೆ ಜಗತ್ತೆ ಬಾಗುತ್ತದೆ ಎಂದರು.

ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ ಮಾತನಾಡಿ ಶಿಕ್ಷಕರ ಸ್ಥಾನ ವಿಶೇಷವಾದುದು, ಜಗತ್ತಿಗೆ ದಿವ್ಯ ಜ್ಞಾನ ಕೊಡುವ ಕಾರ್ಯ ಶಿಕ್ಷಕರ ಮೇಲಿದೆ. ತಂದೆ ತಾಯಿ ನಂತರದ ಸ್ಥಾನ ಗುರುವಿಗಿದೆ. ದೇವರ ಸಮಾನರಾದ ಶಿಕ್ಷಕ ಎಲ್ಲರಿಗಿಂತ ಹೆಚ್ಚಿನ ಸ್ಥಾನ ಸಮಾಜದಲ್ಲಿ ಹೊಂದಿದ್ದಾರೆ. ಒಬ್ಬ ವ್ಯಕ್ತಿಯನ್ನು ವಿಶೇಷ ಗೌರವಾನ್ವಿತ ವ್ಯಕ್ತಿಯನ್ನಾಗಿ ರೂಪಿಸುವ ಸಾಮರ್ಥ್ಯ ಶಿಕ್ಷಕರಿಗೆ ಮಾತ್ರ ಇದೆ ಎಂದರು.

ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಮಾತನಾಡಿ, ಶಿಕ್ಷಕರು ಮಕ್ಕಳ ಶ್ರೇಯೋಭಿವೃದ್ಧಿಗೆ ಕರ್ತವ್ಯ ನಿರ್ವಹಿಸುವವರಾಗಿದ್ದಾರೆ. ಶಿಕ್ಷಕರು ಸದಾ ತಾಯಿ ಹೃದಯದವರಾಗಿದ್ದಾರೆ. ನಮ್ಮ ಗ್ರಾಮೀಣ ಮಕ್ಕಳ ಬದುಕು ಕಟ್ಟಿಕೊಡುವವರಾಗಿದ್ದಾರೆ. ನಿಮ್ಮ ಕಾರ್ಯ ಮೆಚ್ಚುವಂತದ್ದು, ಬಬಲೇಶ್ವರ, ತಿಕೋಟಾ ಹಾಗೂ ವಿಜಯಪುರ ಗ್ರಾಮೀಣ ವಲಯದಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರು ಮಕ್ಕಳ ಹಿತ ಬಯಸಿ ಕೆಲಸ ಮಾಡುತ್ತಾರೆ. ಸಂಬಳಕ್ಕಾಗಿ ಕೆಲಸ ಮಾಡದೆ ಮಕ್ಕಳ ಹಿತಕೊಸ್ಕರ ಕರ್ತವ್ಯ ನಿರ್ವಹಿಸುತ್ತಾರೆ ಎಂದರು.

ಬಿಇಒ ಬಸವರಾಜ ತಳವಾರ ಪ್ರಾಸ್ತಾವಿಕವಾಗಿ ಮಾತನಾಡಿ, ಶಿಕ್ಷಕ ವೃತ್ತಿಗಿಂತ ಪವಿತ್ರ ವೃತ್ತಿ ಬೇರೊಂದಿಲ್ಲ. ಭೂಮಿಗೆ ಜೀವ ತುಂಬಿಕೊಂಡು ಬಂದ ಮಗುವಿನ ಭವಿಷ್ಯ ನಿರ್ಮಾಣ ಮಾಡುವ ಕಾರ್ಯ ಶಿಕ್ಷಕರ ಮೇಲಿದೆ. ಆ ಮಗು ಸುಭದ್ರ ಬದುಕು ಕಟ್ಟಿಕೊಳ್ಳಲು ಉತ್ತಮ ಶಿಕ್ಷಣವನ್ನು ನೀಡಬೇಕು. ಸರ್ಕಾರದ ಯೋಜನೆಗಳನ್ನು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ತಲುಪಿಸುವ ಕಾರ್ಯ ನಾವು ಮಾಡಬೇಕಾಗಿದೆ ಎಂದರು.

ತಹಸೀಲ್ದಾರ ಪ್ರಶಾಂತ ಚನಗೊಂಡ, ಸಚಿವರ ಆಪ್ತ ಸಹಾಯಕ ಸಂತೋಷ ಲೋಕುರೆ ಮಾತನಾಡಿದರು.

ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಹಾಗೂ ಸಾವಿತ್ರಿಬಾಯಿ ಫುಲೆ ಭಾವಚಿತ್ರಕ್ಕೆ ಗಣ್ಯರಿಂದ ಪುಷ್ಪಾರ್ಚನೆ ಮಾಡಲಾಯಿತು. ವೇದಿಕೆಯೂ ಗ್ರಾಮೀಣ ಸೊಗಡಿನ ಹಸಿರು ತೋರಣಗಳಿಂದ ಶೃಂಗಾರಗೊಂಡಿತ್ತು.

ತಿಕೋಟಾ ತಾಲ್ಲೂಕ ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಬಸವಂತರಾಯಗೌಡ ಬಿರಾದಾರ, ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಡಿ. ಮೊಸಲಗಿ ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷ ಅರ್ಜುನ ಲಮಾಣಿ, ಪ್ರಫುಲಕುಮಾರ ಮಂಗನವರ, ಶಿವಗೊಂಡ ಬಿರಾದಾರ, ಎಂ.ಕೆ. ಬಿರಾದಾರ, ಎ.ಬಿ. ಧಡಕೆ, ನೀಲಾ ಇಂಗಳೆ, ಬಿ.ಎಸ್.ಮಠ, ವಸಂತ ನಾಯಕ, ಸಂದೀಪ ದೇಶಪಾಂಡೆ, ಹನಮಂತ ಕುಡಚಿ, ಎಂ.ಎನ್.ನಾಯಕ, ರಮೇಶ ಜಾಧವ, ಚನ್ನಯ್ಯ ಮಠಪತಿ, ಮುತ್ತು ಪುಜಾರಿ, ಅಶೋಕ ಭಜಂತ್ರಿ, ಉದಯ ಕೊಟ್ಯಾಳ, ಅಕ್ಕೂಬಾಯಿ ನಾಯಕ, ಎಂ.ಎಸ್ ಟಕ್ಕಳಕಿ, ಹನಮಂತ ಕೊಣದಿ, ಸಿ.ಟಿ. ಜತ್ತಿ, ಪುಷ್ಪಾ ಗಚ್ಚಿನಮಠ, ಅಶೋಕ ಚನಬಸಗೋಳ, ಅಶೋಕ ಬೂದಿಹಾಳ, ರಾಜಶೇಖರ ಬನಸೋಡೆ, ಎನ್.ಝೆಡ್. ಹೊನಸೂರೆ, ಮಲ್ಲಿಕಾರ್ಜುನ ಮಾದರ, ಹುಸೇನ, ಗಜಾನಂದ ಜುಂಜರವಾಡ ಇದ್ದರು.

ಪ್ರಭು ಬಿರಾದಾರ ಸ್ವಾಗತಿಸಿದರು. ಬಿ.ಎಸ್. ಉಪಾಸೆ ನಿರೂಪಿಸಿದರು. ಬಿ.ಎನ್. ತೇಲಿ ವಂದಿಸಿದರು.

# ಶಿಕ್ಷಕರ ದಿನಾಚರಣೆ: ಮುಂದೆ ಗುರಿ, ಹಿಂದೆ ಗುರು ಇರಲಿ




**ಬಾಗಲಕೋಟೆ :** ಅವರ ಅಮೂಲ್ಯವಾದ ಆಲೋಚನೆಗಳು ನಮಗೆ ಹೊಸ ಜೀವನ ಮಾರ್ಗವನ್ನು ತೋರಿಸುತ್ತವೆ. ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರು ಶಿಕ್ಷಣ ತಜ್ಞರಾಗಿ ದೇಶಕ್ಕೆ ಅತ್ಯಮೂಲ್ಯವಾದ ಕೊಡುಗೆ ನೀಡಿದ್ದಾರೆ ಎಂದು ಡಾ. ತಪಸ್ಪ್ರತ ತ್ರಿಪಾಠಿ ತಿಳಿಸಿದರು.

ಎಂದು ನಗರದ ಎಂ.ಆರ್.ಎನ್ ಆಯುರ್ವೇದಿಕ ಮೆಡಿಕಲ್ ಕಾಲೇಜಿನ ಡಾ॥ ಶಿವಕುಮಾರ್ ಗಂಗಲ, ಡೀನ್ ಹಾಗೂ ಕಾಲೇಜ ಆಡಳಿತಾಧಿಕಾರಿಗಳು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಸ್ಮರಣಾರ್ಥ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಬಾಗವಹಿಸಿ ಮಾತನಾಡಿ. ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಸ್ಮರಣಾರ್ಥವಾಗಿ ಭಾರತದಲ್ಲಿ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ. ಅವರು ಮಹಾನ್ ವಾಗ್ಮಿ, ವಿದ್ವಾಂಸ, ತತ್ವಜ್ಞಾನಿ, ಶಿಕ್ಷಣ ತಜ್ಞ ಮತ್ತು ರಾಜನೀತಿಜ್ಞರಾಗಿದ್ದರು. ಅವರು ಸ್ವತಂತ್ರ ಭಾರತದ ಮೊದಲ ಉಪರಾಷ್ಟ್ರಪತಿ ಮತ್ತು ಎರಡನೇ ರಾಷ್ಟ್ರಪತಿಯೂ ಹೌದು. ಶಿಕ್ಷಣ ಕ್ಷೇತ್ರಕ್ಕೆ ಅವರ ಕೊಡುಗೆ ಅನನ್ಯ, ಅವರು ಉಪನಿಷತ್ತುಗಳ ವ್ಯಾಖ್ಯಾನಕಾರರೂ ಆಗಿದ್ದರು. ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಕೆಲವು ಸ್ಫೂರ್ತಿದಾಯಕ ಮತ್ತು ಪ್ರೇರಕ ಉಲ್ಲೇಖಗಳನ್ನು ಇಲ್ಲಿ ನೀಡಲಾಗಿದೆ.

ಡಾ. ಮುರಳಿಧರ ಬಡಿಗೇರ ಮಾತನಾಡಿ, ಜ್ಞಾನವು ನಮಗೆ ಶಕ್ತಿಯನ್ನು ನೀಡುತ್ತದೆ, ಪ್ರೀತಿ ನಮಗೆ ಪೂರ್ಣತೆಯನ್ನು ನೀಡುತ್ತದೆ ಹಾಗೂ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಆದರ್ಶಗಳನ್ನು ನಾವು ಅಳವಡಿಸಿಕೊಳ್ಳಬೇಂದು ಹೇಳಿದರು.

ಕಾಯಕ್ರಮದಲ್ಲಿ ಡಾ॥ ಶಿವಕುಮಾರ್ ಗಂಗಲ,ಡೀನ್ ಹಾಗೂ ಕಾಲೇಜ ಆಡಳಿತಾಧಿಕಾ–ರಿಗಳು ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ. ಪ್ರಹ್ಲಾದ್ ಗಂಗಾವತಿ ಹಾಗೂ ಮೆಡಿಕಲ್ ಕಾಲೇಜಿನ ಪ್ರಾದ್ಯಾಪಕರಾದ ದೀಪಾ ಗಂಗಲ್, ಮಹಾತೇಂಶ ಹೀರಮಠ ಮತ್ತು ಶಶಿಕಾಲ್ ಕುರಬೇಟ್ ಈಶ್ವರ ಪಾಟೀಲ್, ವೆಂಕಟೇಶ ಗೌಡರ ಹಾಗೂ ಇನ್ನುಳಿದ ಎಲ್ಲ ಪ್ರಾದ್ಯಪಕರು ಹಾಗೂ ವಿದ್ಯಾಥೀಗಳು ಭಾಗವಹಿಸಿದ್ದರು.

## ಆಸ್ಥಾನಾ–ಎ–ಖದೀರಿ ಹಲಕರ್ಟಾ ಶರೀಫ್ ದರ್ಗಾ ಪೀಠಾಧಿಪತಿಗಳಿಗೆ ಸನ್ಮಾನ



**ವಾಡಿ :** ಇಲ್ಲಿಗೆ ಸಮೀಪದ ಹಲಕರ್ಟಿ ಗ್ರಾಮದ ಆಸ್ಥಾನಾ–ಎ–ಖದೀರಿ ಹಲಕರ್ಟಾ ಶರೀಫ್ ದರ್ಗಾದ ಪೀಠಾಧಿಪತಿ ಅಬೂಬ್ ತುರಾಬ್ ಶಾ ಅವರನ್ನು ಹಲಕರ್ಟಿ ವೀರಭದ್ರೇಶ್ವರ ಸಂಸ್ಥಾನದ ಪೀಠಾಧಿಪತಿ ಮುನೀಂದ್ರ ಶಿವಾಚಾರ್ಯರು ಸರಳ ಸಮಾರಂಭದಲ್ಲಿ ಆತ್ಮೀಯವಾಗಿ ಸನ್ಮಾನಿಸಿದರು.

ಹಲಕರ್ಟಿ ಗ್ರಾಮದ ನೂರಾರು ರೈತರು ತಮ್ಮ ಹೊಲದ ಇಳುವರಿಯನ್ನು ರಾಶಿ ಮಾಡಿಕೊಳ್ಳಲು ಮುಕ್ತವಾಗಿ ಸ್ಥಳ ಒದಗಿಸುತ್ತಿರುವ ಹಲಕರ್ಟಾ ದರ್ಗಾ ಶರೀಫ್ ಪೀಠಾಧಿಪತಿಗಳ ರೈತಪರ ನಿಲುವು ಹಾಗೂ ಜನೋಪಯೋಗಿ ಧೋರಣೆಯನ್ನು ಮೆಚ್ಚಿ ಗ್ರಾಮಸ್ಥರೊಂದಿಗೆ ಪಾದಯಾತ್ರೆಯಲ್ಲಿ ತೆರಳಿ ಸನ್ಮಾನಿಸಿದ ಮುನೀಂದ್ರ ಶಿವಾಚಾರ್ಯರು, ಸದಾ ರೈತರ ಪರ ನಿಂತಿರುವ ದರ್ಗಾ ಮುಖ್ಯಸ್ಥರನ್ನು ಶ್ಲಾಘಿಸಿದರು.

ಈ ವೇಳೆ, ಸನ್ಮಾನ ಸ್ವೀಕರಿಸಿ ಮಾತನಾಡಿದ ದರ್ಗಾ ಪೀಠಾಧಿಪತಿ ಅಬೂಬ್ ತುರಾಬ್ ಶಾ ಅವರು ಮಾತನಾಡಿ, ದರ್ಗಾ, ದೇವಸ್ಥಾನ ಎಂಬುದು ನಾವು ಮಾಡಿಕೊಂಡ ವ್ಯವಸ್ಥೆಗಳೇ ಆಗಿದ್ದರೂ ಪ್ರಾರ್ಥನಾ ಮಂದಿರಗಳು ಸಾರ್ವಜನಿಕರ ಪಾಲಿನ ಆಸ್ತಿಗಳಾಗಿವೆ. ಹೀಗಾಗಿ, ನಾವೆಲ್ಲರೂ ಒಂದೇ ದೇವರ ಮಕ್ಕಳಾಗಿದ್ದು, ಒಂದೇ ಕುಟುಂಬದ ಸದಸ್ಯರು ಎಂಬುದನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು.

ಮುಂದುವರೆದು ಮಾತನಾಡಿದ ದರ್ಗಾ ಪೀಠಾಧಿಪತಿಗಳು, ರೈತರು ನೆಮ್ಮದಿಯಿಂದ ಇರುವುದಾದರೆ ಮಾತ್ರ ನಾವೆಲ್ಲರೂ ನೆಮ್ಮದಿಯಿಂದ ಬದುಕಬಹುದು.

ಹೀಗಾಗಿ, ರೈತರಿಗಾಗಿ ದರ್ಗಾ ಬಾಗಿಲು ಸದಾ ತೆರೆದಿರುತ್ತದೆ. ಅಷ್ಟೇ ಅಲ್ಲ; ಹಲಕರ್ಟಾ ಗ್ರಾಮದ ಶ್ರೀ ವೀರಭದ್ರೇಶ್ವರ ಸಂಸ್ಥಾನಕ್ಕೆ ಅಗತ್ಯವಿರುವ ಎಲ್ಲ ಸಹಾಯ–ಸಹಕಾರಗಳನ್ನು ಮಾಡುವುದಾಗಿಯೂ ಅವರು ಭರವಸೆ ನೀಡಿದರು.ಕಾಂಗ್ರೆಸ್ ಮುಖಂಡ ಸೈಯದ್ ಮೊಹ್ಮದ್ ಸಾಹೇಬ್, ಜಾಫರ್ ಹುಸೇನ್, ಅಬ್ದುಲ್ ಲತೀಫ್ ಜುನೇದಿ, ಸಾಯಬಣ್ಣ ಹಿರಗೊಂಡ, ರಾಜುಗೌಡ, ಅಪ್ಪು ಸಾಹುಕಾರ ಜೀವಣಗಿ, ಉಮಾಗೌಡ ಹಾಗೂ ಬಸವರಾಜ ಸೇರಿದಂತೆ ರೈತರು ಹಾಗೂ ಗ್ರಾಮಸ್ಥರು ಈ ವೇಳೆ ಉಪಸ್ಥಿತರಿದ್ದರು.

# ಮೊಬೈಲ್‌ದಲ್ಲಿ ಆಧಾರ ಕಾರ್ಡ ಫೋಟೊ, ಪಿಡಿಎಫ್ ಪ್ರತಿ ಇದ್ದರೂ ಸಾಕು



**ಧಾರವಾಡ :** ಸಾರಿಗೆ ಇಲಾಖೆ ಅಧಿಕಾರಿಗಳು ಆಧಾರ್ ಕಾರ್ಡ್‌ನ ಭೌತಿಕ ಪ್ರತಿಯನ್ನು ಕೊಂಡೊಯ್ಯಬೇಕಂತಿಲ್ಲ. ಮಹಿಳೆಯರ ಮೊಬೈಲ್ ಫೊ?ನ್‌ನಲ್ಲಿ ಆಧಾರ್‌ನ ಡಿಜಿಟಲ್ ನಕಲು ಅಥವಾ ಆಧಾರ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿದ ಆಧಾರ್ ಪಿಡಿಎಫ್‌ನ್ನು ಕಂಡಕ್ಟರ್‌ಗೆ ತೋರಿಸಬಹುದು. ಇದು ಮಹಿಳೆಯರಿಗೆ ಮತ್ತಷ್ಟು ಅನುಕೂಲವನ್ನು ಕಲ್ಪಿಸಿಕೊಡಲಾಗುತ್ತದೆ ಎಂದು ಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಸ್. ಆರ್.ಪಾಟೀಲ ಅವರು ಹೇಳಿದರು.

ಅವರು ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಗ್ಯಾರಂಟಿ ಯೋಜನೆಗಳ ಸದಸ್ಯ ಸುಧೀರ ಎಸ್. ಬೋಳಾರ ಅವರು ಮಾನತಾಡಿ, ಸಾರ್ವಜನಿಕ ಸಾರಿಗೆಯಲ್ಲಿ ಉಚಿತ ಪ್ರಯಾಣಕ್ಕಾಗಿ ಆಧಾರ್ ಕಾರ್ಡ್‌ನ್ನು ತಮ್ಮ ಮೊಬೈಲ್ ಫೊ?ನ್‌ನಲ್ಲಿ ತೋರಿಸುವುದು ಪರಿಗಣಿಸಬೇಕು ಎಂದು ಹೇಳಿದರು. ಕೆಲವು ಮಹಿಳೆಯರು ಆಧಾರ್ ಕಾರ್ಡ್ ಪ್ರತಿಯನ್ನು ತಂದಿರುವುದಿಲ್ಲ ಮತ್ತು ಹಣವನ್ನು ಇಟ್ಟು ಕೊಂಡಿರುವುದಿಲ್ಲ ಆದ್ದರಿಂದ ಮಹಿಳೆಯರು ಬಸ್ಸಿನಲ್ಲಿ ಉಚಿತವಾಗಿ ಪ್ರಯಾಣಿಸಲು ತೊಂದರೆಯಾಗುತ್ತಿದೆ ಎಂದುರು.

ಸದಸ್ಯರಾದ ಅರವಿಂದ ಏಗನಗೌಡರ ಮಾತನಾಡಿ, ತಡಕೋಡ ಗ್ರಾಮದ ಫಲಾನುಭವಿಗಳು ಪಡಿತರ ಪಡೆಯಲು ಹತ್ತಿರದ ಗ್ರಾಮಗಳಿಗೆ ತೆರಳಬೇಕಾದ ಪರಿಸ್ಥಿತಿ ಇದೆ. ವೃದ್ಧರು, ಮಹಿಳೆಯರು ಮತ್ತು ಅಶಕ್ತರಿಗೆ ತೀವ್ರ ತೊಂದರೆಯಾಗುತ್ತಿದೆ. ಎರಡು ಸಾವಿರಕ್ಕೂ ಹೆಚ್ಚು ಕುಟುಂಬಗಳ ಪಡಿತರ ಚೀಟಿಗಳಿವೆ. ಗ್ರಾಮದಲ್ಲಿಯೇ ಹೊಸ ನ್ಯಾಯಬೆಲೆ ಅಂಗಡಿ ತೆರೆಯಲು ಕ್ರಮ ಕೈಗೊಳ್ಳಬೇಕು ಎಂದು ವಿನಂತಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ರಾತ್ರಿ ವಸ್ತಿ ಉಳಿಯುವ ಬಸ್ ಚಾಲಕ ಮತ್ತು ನಿರ್ವಾಹಕರಿಗೆ ವಾಸ್ತವ್ಯದ ವ್ಯವಸ್ಥೆ ಮಾಡಿಕೊಡಬೇಕೆಂಬುದು ಸಾರಿಗೆ ಇಲಾಖೆ ಅಧಿಕಾರಿಗಳು ಬೇಡಿಕೆ ಇದೆ. ಅನೇಕ ಮಾರ್ಗಗಳಲ್ಲಿ ಚಾಲಕರು ಮತ್ತು ನಿರ್ವಾಹಕರು ರಾತ್ರಿ ವೇಳೆ ಗ್ರಾಮಗಳಲ್ಲಿ ಉಳಿಯಬೇಕಾಗುತ್ತದೆ. ಅವರಿಗೆ ಸೂಕ್ತ ವಸತಿ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕೆಂದು ಸಾರಿಗೆ ಇಲಾಖೆ ಅಧಿಕಾರಿಗಳು ವಿನಂತಿಸಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಭುವನೇಶ ಪಾಟೀಲ ಅವರು ಮಾತನಾಡಿ, ಗ್ರಾಮಗಳಲ್ಲಿರುವ ಪಂಚಾಯಿತಿಗಳಲ್ಲಿ ವ್ಯವಸ್ಥೆಯನ್ನು ರೂಪಿಸಿಕೊಡುವುದಾಗಿ ತಿಳಿಸಿದರು. ಪಂಚ ಗ್ಯಾರಂಟಿ ಯೋಜನೆಗಳನ್ನು ಜಿಲ್ಲೆಯಲ್ಲಿ ಸಂಬಂಧಿಸಿದ ಇಲಾಖೆಗಳು ಉತ್ತಮವಾಗಿ ಅನುಷ್ಠಾನಗೊಳಿಸುತ್ತಿವೆ. ಗ್ರಾಮೀಣ ಮಟ್ಟದಲ್ಲಿ ಅಗತ್ಯವಿರುವ ಎಲ್ಲ ಸಹಕಾರವನ್ನು ನೀಡುವುದಾಗಿ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ ಅವರು ಸ್ವಾಗತಿಸಿ, ಸಭೆ ನಿರ್ವಹಿಸಿದರು. ಜಿಲ್ಲಾ ಪ್ರಾಧಿಕಾರದ ಉಪಾಧ್ಯಕ್ಷರಾದ ಮುರಗಯ್ಯಾ ವಿರಕ್ತಮಠ, ಸುಧೀರ. ಎಸ್. ಬೋಳಾರ, ರೇಹನ್ ರಝಾ ಏನಾಪೂರಿ, ರತ್ನಾ ತೇಗೂರಮಠ, ಶಾಂತಪ್ಪ ಎಸ್. ಅಕ್ಕಿ ಅವರು ವೇದಿಕೆಯಲ್ಲಿದ್ದರು.

ಜಿಲ್ಲಾ ಪ್ರಾಧಿಕಾರದ ಸದಸ್ಯರಾದ ಅರವಿಂದ ಏಗನಗೌಡರ, ವಿನಾಯಕ ಕುರುಬರ, ಬಸಪ್ಪ ಮಹಾಬಳೇಶ್ವರ ಬಾವಕಾರ, ಶಿವಾನಂದ ಭೂಮಣ್ಣವರ, ಸಾವಿತ್ರಿ ಬಸವರಾಜ ಭಗವತಿ, ಗೀತಾ ಥಾವಂಶಿ ಹಾಗೂ ಇತರ ಸದಸ್ಯರು, ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.



**ಕಲಬುರಗಿ :** ಜಯದೇವ ಆಸ್ಪತ್ರೆಯ ನೂತನವಾಗಿ ಮುಖ್ಯ ಅಡಳಿತಾಧಿಕಾರಿಯಾಗಿ ನೇಮಕವಾಗಿರುವ ಡಾ. ಗುಗವಾಡ ಅವರನ್ನು ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಸಂಗಮೇಶ ನಾಗನಳ್ಳಿ ಆತ್ಮೀಯವಾಗಿ ಸನ್ಮಾನಿಸಿದರು. ಮಲ್ಲಿನಾಥ್ ನಾಗನಹಳ್ಳಿ, ಶರಣು ಭೂಸನೂರ, ಪವನಕುಮಾರ ವಳಕೇರಿ, ಮಂಜು ರೆಡ್ಡಿ,ಶಿವರಾಜ ಡಿಗ್ಗಾವಿ, ಶಿವಕುಮಾರ ಆಳಂದಕರ್, ವಿನೋದ್ ಪಾಟೀಲ್ ಸರಡಗಿ, ಭಾವುರಾಯ ಪಾಣೆಗಾಂವ ಹಾಗೂ ನಾಗನಹಳ್ಳಿ ಗೆಳೆಯರ ಬಳಗ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State